ಕಂಟಿಕಾರಿ ಮಹಾಕಾವ್ಯಂ

• •

ಲೇಖಕರು:-

ಶ್ರೀ ಬಿ. ಎಚ್. ಶ್ರೀಧರ

ನಿವೃತ್ತ ಪ್ರಾಚಾರ್ಯರು


• •

ದೀನಬಂಧು ಪ್ರಕಾಶನ

ಹೊನ್ನಾವರ-೫೮೧೩೩೪

B.H. [illegible]
6-3-1989


ಕಂಟಕಾರಿ ಮಹಾಕಾವ್ಯಂ




ಲೇಖಕರು:-

ಶ್ರೀ ಬಿ. ಎಚ್. ಶ್ರೀಧರ

ನಿವೃತ್ತ ಪ್ರಾಚಾರ್ಯರು



ಪ್ರಥಮ ಮುದ್ರಣ 1981



ಪ್ರಕಾಶನ

ದೀನಬಂಧು ಮುದ್ರಣ ಮತ್ತು ಪ್ರಕಾಶನ

ರಥಬೀದಿ ಹೊನ್ನಾವರ (ಉ. ಕ.)

ಬೆಲೆ ರೂ. ೫-೦೦

ಮುನ್ನುಡಿ

ಸನ್ಮಾನ್ಯರಾದ ಶ್ರೀ|| ಬ. ಹೆ. ಶ್ರೀಧರರನ್ನು ನಮ್ಮ ಬಹುಶ್ರುತ ವಿಮರ್ಶವಿಚಕ್ಷಣ ಶ್ರೀ|| ಗೌರೀಶ ಕೈಕಿಣಿಯುರು "ಆಧುನಿಕ ಸರ್ವಜ್ಞ" ಎಂದು ಕರೆದು, ಅವರ ಬಹುಮುಖ ಸಾಹಿತ್ಯ ಕೃತಿಗಳ ಪ್ರಶಂಸೆ ಮಾಡಿ, ಹತ್ತುವರ್ಷ ದಾಟಿದೆ. ಶ್ರೀಧರರ ಪ್ರಕಟಿತ ಕೃತಿಗಳನ್ನಿಲ್ಲಿ ಎತ್ತಿ ಹೇಳುವುದು ಕ್ರಮಪ್ರಾಪ್ತವೂ ಸಮಯೋಚಿತವೂ ಆಗಿದೆ. (೧)'ಕಿನ್ನರ ಗೀತ'(೨)'ಅಮೃತ ಬಿಂದು' (೩) 'ಮಂಜು ಗೀತ' (೪) 'ಮೇಘನಾದ' (೫) ರಸಯಜ್ಞ: ಇವು ಕವನ ಸಂಗ್ರಹಗಳು. (೧) ಹೊಸಗನ್ನಡ ಸಾಹಿತ್ಯ ಶೈಲಿ (೨) ಬೇಂದ್ರ ೩) ಟಿ.ಎಸ್. ಈಲಿಯಟ್ (೪) ಕವೀಂದ್ರರವೀಂದ್ರ-ಇವು ವಿಮರ್ಶಗ್ರಂಥಗಳು. ೧) ಭಾರತೀಯ ನಾಗರಿಕತೆಗೆ ಮನುವಿನ ಕೊಡುಗೆ (೨) ಜ್ಞಾನ ಸೂತ್ರ ೩) ರಾಷ್ಟ್ರ ಸೂತ್ರ (೪) ಪ್ರತಿಭೆ (೫) ಮಾನಸದರ್ಪಣ (೬) ವಿದೇಶದ ತಿಳುವಳಿಕೆಗಳು (೭)ಪಂಚ ಮುಖಿ — ಇವು ಆಧಾರಗ್ರಂಥಗಳಂತೆ ಇರುವ ಪ್ರೌಢವಿಚಾರ ವಿಶ್ಲೇಷಣ ಗ್ರಂಥಗಳು (೧) ಸಂಸ್ಕೃತ ಸುಭಾಷಿತ ಸಂಗ್ರಹ (೨) ಮನುಸ್ಮೃತಿಯ ೨ನೆಯ ಅಧ್ಯಾಯ (೩) ಭಾರತೀಯ ವಾಙ್ಮಯ (೪) ಭಾರತೀಯ ರಾಜ್ಯಶಾಸ್ತ್ರದ ಸತ್ವ ಮತ್ತು ಸ್ವರೂಪ (೫) ಸ್ವಾತಂತ್ರ್ಯ ಮೀಮಾಂಸೆ ಇವು ಭಾಷಾಂತರ ಕೃತಿಗಳು(೧)ರಮಣ ಮಹರ್ಷಿ (೨)ಮುತ್ತು ರತ್ನ (೩) ಮಯೂರ ಶರ್ಮ (೪) ಕೌಶಿಕ ರಾಮಾಯಣ-ಇವು ಮಕ್ಕಳ ಸಾಹಿತ್ಯ. (೧) ಭಾಷಣ ಭೈರವರ ಒಡ್ಡೋಲಗ (೨) ಮರುಳ ಸಿದ್ಧನ ಮಹಾವಚನಗಳು — ಇವು ವಿಡಂಬನ ಸಾಹಿತ್ಯ ರತ್ನಗಳು. ಬನವಾಸಿಯ ಕದಂಬರು (ಇತಿಹಾಸ ಗ್ರಂಥ) ಉತ್ತರ ಕನ್ನಡದ ಪ್ರೇಕ್ಷಣೀಯ ಸ್ಥಳಗಳು— ಪ್ರವಾಸೀ ಸಾಹಿತ್ಯ. ನೆಹರು ಉವಾಚ (ಸೂಕ್ತಿ ಮುಕ್ತಾಫಲ) — ಹೀಗೆ ಮೂವತ್ತರಷ್ಟು ಅತ್ಯುತ್ತಮ ಕೃತಿಗಳನ್ನು ರಚಿಸಿದ ಈ ಧೀಮಂತ ಸಾಹಿತಿಯನ್ನು ಶ್ರೀ "ಕೈಕಿಣಿ" 'ಸರ್ವಜ್ಞ' ಎಂದು ಕರೆದುದು ಸರ್ವಥಾ ಯಥಾರ್ಥವೇ ಸರಿ. ಇಂತಹ ಬಹುಮುಖ ಪ್ರತಿಭೆಯ ಸಾಹಿತಿಗೆ ಹೊಸ ಕನ್ನಡ ಸಾಹಿತ್ಯೇತಿಹಾಸದಲ್ಲಿ ದೊರೆತ ಸ್ಥಾನ-ಮಾನ ಎಂಥಾದ್ದು ?

ಅವರು ಇಷ್ಟರಲ್ಲೇ ನಮ್ಮ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಬೇಕಾಗಿದ್ದಿತು; ಹಾಗೆಯೇ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರೂ

ಆಗಬೇಕಾಗಿದ್ದಿತು. ಆದರೆ, ನಿರ್ಮತ್ಸರತೆ, ಮತ್ತು "ತನ್ನಂತೆ ಪರರ ಬಗೆ" ಎಂಬ ಉದಾತ್ತಭಾವನೆ, ನಮ್ಮ 'ಹಿರಿಯ' ಹಾಗೂ "ಕಾರಣಿಕ" ಸಾಹಿತಿಗಳಲ್ಲಿ ಲುಪ್ತವಾಗಿರುವುದರಿಂದ ಇವರಂತಹ ಅರ್ಹತೆಯುವರು ನಮ್ಮಭಾಸಕವಿ ಹೇಳಿ ಹೋದಂತೆ-"ಭನ್ನಾಭವಂತಿ ಭುವಿಸತ್ಪುರುಷಾ:ಕಥಂಚಿತ್" ಆಗಬೇಕಾಗಿ ಬಂದಿದೆ. ಶೇಕಡಕ್ಕೆ ೪೦ ರಷ್ಟು ಸಾಕ್ಷರರಿಲ್ಲದ ನಮ್ಮ ದೇಶದಲ್ಲಿ ಕಥೆ;ಕಾದಂಬರಿ,ಚಲನಚಿತ್ರರಚನಕಾರರಿಗೇ ಹಿರಿಮೆಯ ಪಟ್ಟಮಣೆ ಮೀಸಲು. ಇಂಥ ರಸಿಕರ ರಾಜ್ಯದಲ್ಲಿ, ಶ್ರೀಧರರಂತಹ ಉಚ್ಚಶ್ರೇಣಿಯ ಸಾಹಿತಿಗಳಿಗೆ ದೊರೆಯಬೇಕಾಗಿದ್ದ ಸ್ಥಾನ-ಮಾನ ದೊರೆತಿಲ್ಲವೆಂಬುದು ಸೋಜಿಗವೇನಲ್ಲ!

ಅವರು ಈ ವಿಡಂಬನ ಕಾವ್ಯಕೃತಿ–ಯಾವದೃಷ್ಟಿಯಿಂದ ನೋಡಿದರೂ ಇಂದಿನ ರಾಷ್ಟ್ರಜೀವನದ ರೀತಿನೀತಿಗೆ ಕನ್ನಡಿಯೆಂಬಂತಿದೆ. ದಿವಂಗತ ರಾಜರತ್ನರು ೪೦ ವರ್ಷಗಳ ಹಿಂದೆಯೇ ಇಂದಿನ ಸಾಹಿತ್ಯಪ್ರಪಂಚವನ್ನು ಮನೋಜ್ಞವಾಗಿ ನಿರೂಪಿಸುವ" ಪುರುಷಸರಸ್ವತಿ" ಎಂಬ ವಿಡಂಬನ ಕಾವ್ಯಕೃತಿ ರಚಿಸಿದ್ದರೆ.ಶ್ರೀ ಶ್ರಿಧರರು ಇಂದಿನ ಸಾಮಾಜಿಕ,ಸಾಹಿತ್ಯಿಕ, ರಾಜಕೀಯ ಪರಿಸ್ಥಿತಿಗಳನ್ನೆಲ್ಲ ವಿಡಂಬಿಸುವ ಈ ಕೃತಿಯಲ್ಲೊಂದು ಸಾಕಲ್ಯವನ್ನುಸಾಧಿಸಿದ್ದಾರೆ.

'ನಾಸಪ್ರಜ್ಞಾವಿಲಾಸ' 'ಜಿಹ್ವಾಪ್ರಜ್ಞಾವಿಲಾಸ' 'ಕರ್ಣಪ್ರಜ್ಞಾವಿಲಾಸ' 'ನೇತ್ರಪ್ರಜ್ಞಾವಿಲಾಸ' 'ಮುಖಪ್ರಜ್ಞಾವಿಲಾಸ' 'ಕುಂತಲಪ್ರಜ್ಞಾವಿಲಾಸ' ಕಂಠಪ್ರಜ್ಞಾವಿಲಾಸ' 'ನಖಪ್ರಜ್ಞಾವಿಲಾಸ' 'ಪೃಷ್ಠಪ್ರಜ್ಞಾವಿಲಾಸ' 'ವಿಚಿತ್ರಪ್ರಜ್ಞಾವಿಲಾಸ' ಎಂಬ ಹತ್ತುಸರ್ಗಗಳಲ್ಲಿ ಇಂದಿನ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ನಡೆದಿರುವ ವಿಕೃತಿಗಳನ್ನು ರಸವತ್ತಾಗಿ ವಿಡಂಬಿಸಿದ್ದಾರೆ.

ಈ ವಿಡಂಬನಗಳೆಲ್ಲವೂ ಏಕಾಮುಖದೃಷ್ಟಿಯುಳ್ಳವುಗಳು, ಅಸತ್ಯ ಅನ್ಯಾಯ, ಅನಾಚಾರ, ಅಸಮಾನತೆ, ಅಸಭ್ಯತೆ ಮೊದಲಾದ ನಿಷಿದ್ಧ ನಡತೆಗಳನ್ನು ಕಿತ್ತೊಗೆದು ಸಮಾಜಸ್ವಾಸ್ಥ್ಯವನ್ನುಂಟು ಮಾಡುವ ಛಲದಿಂದಲೇ ನವ್ಯ' 'ನವೋದಯ' 'ಬಂಡಾಯ' 'ದಲಿತ' ಎಂಬ ಚತುರ್ಮುಖ ಸಾಹಿತ'

'ಎಂದು ದುಮು ದುಮಿಸುತ್ತಿದೆ. ಶ್ರೀಧರರ ಈ ಕಾವ್ಯಕೃತಿಯೂ ಅದೇ ಆದರ್ಶವುಳ್ಳದಾಗಿ ಸ್ಫುರಣಗೊಂಡಿದೆ. ಅವರ ಈ ಸ್ಫುರಣದ ಹಿಂದೆ ಸರ್ವ ಸುಖಸಂತೋಷ ಸಮೃದ್ಧಿಯ ಮಾನವೀಯತಾ ತತ್ವ ಅಡಗಿಕೊಂಡಿಯೆಂಬುದನ್ನು ಓದುಗರು ಸುಲಭವಾಗಿ ಕಂಡುಕೊಳ್ಳಬಹುದು.

ಅವರ ಈ ಕಾವ್ಯದ ಶೈಲಿ ಪ್ರೌಢವಾಗಿದ್ದರೂ-ಹಿಂದಣ ಚಂಪೂಕೃತಿಗಳಂತೆ-ಅದು, ರಸಿಕವಿದ್ವನ್ಮಣಿಗಳನ್ನು ಆನಂದೋಲ್ಲಾಸದಿಂದ ಕುಣಿಸಿ ತಣಿಸುವಂತಿದೆ. ಯಾವ ಕಾವ್ಯಕೃತಿಯೇ ಇರಲಿ,ಅದರ ರಸಾನಂದ ಪಡೆಯ ಬಯಸುವವರಲ್ಲಿ ರಸಜ್ಞತೆಯೊಡನೆ ಅರ್ಥಗ್ರಹಣ ಶಕ್ತಿಯೂ ಇರಬೇಕಾಗುವದು. ಈ ಮಾತನ್ನು ಇಂದಿನ ನವ್ಯ ಕಾವ್ಯ ಪುರೋಭಾಗಿಗಳಕೃತಿಗಳಿಗೂ ಅನ್ವಯಿಸುವಂತಿದೆ-ಎಂದರೆ ಶ್ರೀಧರರ ಕೃತಿಗೆ ಆ ದೋಷ ತಟ್ಟದು. ಈ ಕೃತಿ ನಮ್ಮ ಕನ್ನಡ ಸಾಹಿತ್ಯಾಕಾಶದಲ್ಲಿ ಎಂದಿಗೂ ಹಳತಾಗದ ಉಜ್ವಲ ನಕ್ಷತ್ರವಾಗಿ ಬೆಳಗುವುದೆಂಬಲ್ಲಿ ಸಂದೇಹವಿಲ್ಲ. ಕನ್ನಡದ ರಸಿಕರು ಇದನ್ನೋದಿ ಆನಂದ ಪಡುವರೆಂದು ನಂಬಿದ್ದೇನೆ.

ಜಿ. ಆರ್. ಪಾಂಡೇಶ್ವರ

ಪರಿವಿಡಿ

ನಾಸಪ್ರಜ್ಞಾ ವಿಲಾಸನೆಂಬ ಒಂದನೆಯ ಸರ್ಗ

The WORLD of Nosiles

ಗೊರೆಮೂಗಿನ ನಿದ್ರೇಶ್ವರಿ
ಧರೆಯಂ ಪಾಲಿಸುವ ಪರಿಯನೀಕ್ಷಿಸಲೀಗಳ್।
ತೆರೆಗಂಗಳಿಂದೆ ಪ್ರೋಪಂ
ಸಿರಿ ಸರಸತಿ ಸತಿಯುರಿಕೆನ್ ಮೂಗಿನ ತುದಿಯೊಳ್ ॥೧॥

ಗಿಣಿಮೂಗು ರಾಣಿಗೂ ಗಿಣಿಮೂಗು ಮಂತ್ರಿಗೂ
ಗಿಣಿಮೂಗು ಸಂರಕ್ಷಣಾಧಿಪತಿಗೂ ।
ಘಣೆ ಮೂಗು ನೌಕರರ ಮುಖ್ಯರೆಲ್ಲವರಿಗೂ
ಫಣಿವೇಣಿಯರ ಪಣ್ಯ ಪ್ರಣ್ಯ ಮುಖಕೂ ॥೨॥

ಪೋಗುವ ದಾರಿಯು ಮೂಗಿನ ನೇರಂ
ಕಂಪದ್ದನ್ನೇ ಕಾಂಬುದು ವೀರಂ
ಹೇಗಾದರು ಆದರೆ ಸರಿ ಕಾರ್ಯಂ
ಹೋಗೆಂದರು ಪೋಗದ ಮುದಿ ಧೈರ್ಯಂ ॥೩॥

ಸೊಂಡಿಲಿಗದೂರು ನೋಡು—ಆದರೇಂ ?
ಘಂಡಿಯಾದವರ ಪಾಡು!
ಪಂಡರಾಪುರದ ಪ್ರೇಮು—ವಿಟ್ಠಲಗೆ
ಉಂಡುಳಿದುದೊಗೆವ ನೇಮ ॥೪॥

ಗಂಡ ಹೆಂಡತಿಯುರೆದುರು-ಬದುರಾಗಿ
ಮಂಡೆ ಹಾಕಲು ಮುತ್ತಿಡೆ ।
ಪ್ರಂಡು ಮೂಗುಗಳು ಅಷ್ಟ-ವಕ್ರ ಮುಖ-
ದುಂಡವರನೂ ನಗಿಸವೇ? ॥೫॥

ಆಲಸರ್ ಕೆಲಸಿಗರೆಲ್ಲರ್
ನೆಲಬರನಾಸರ್ ಗಜಾನನ ಪ್ರತಿಮಾನರ್ ।
ತೊಳಸಂಬಟ್ಟೆಯು ದಾರಿಗ–
ರೆಳೆಲಿಂಬೆಯು ಕಾಯಿಗಳ್ ಮಹೀಶೂರರ್ಕಳ್ ॥೬॥

ಅತ್ತರ್-ಸ್ನೋ-ಪೌಡರ್-ಸಿಲ್ಕ್-
ವಸ್ತ್ರ ಪ್ರಮದಾ ವಿಲಾಸ ವಿಟವೇಷಗಳೇ |
ಷಟ್ ಶಾಸ್ತ್ರವಿದರ ನಾಡೊಳ್
ಸುಸ್ತಂ ಬರಿಸುವುವು ಕಣ್ಗೆ ಕುಮನೀಯತೆಯಿಂ ॥೭॥

"ಗುಡ್‌ಮಾರ್ನಿಂಗ್" ಎಂಬುದು ಮೂಗೊಳದನಿ ಪ್ರತಿನಿತ್ಯ
"ಬೆಡ್‌ರೂಂ ಪ್ರಾಪೋಸಸ್" ಸಚಿವಾಲಯದೊಳ್ ಸ್ತುತ್ಯ ।
"ಹೆಡ್‌ಹಂಟಿಂಗ್" ಗುಣವೆದೆಯೊಳ್ ನೌಕರ ಜನರಲ್ಲಿ
"ರೆಡ್ ನೋಸಸ್ ರೆಡ್ ಟೇಪಿಸ್ಟ" ಗ್ರೇ ಸರ ರಿಲ್ಲಿ ॥೮॥

ಹಂಡೆಬಾಯಂಥ ಹೊಳ್ಳೆಗಳಿದ್ದರೂ ಮೂಗು
ಭಂಡತನದಿಂದೆಂಬ ವೊಲ್ ಸರ್ವದುರ್ಗಂಧ
ಪೊಂಡಗಳ ನಡುವಿದ್ದರೂ ದೂರದೀ ಜನರ
ಸಂಭಾವಿತಿಕೆಯು ಕಂಡು
ಚೆಂಡನಾಡಲು ದೇವತಾ ಯುವಕ ಯುವತಿಯರ್
ಹಂಡೆಗಟ್ಟಲೆ ಬಂಡವಾಳ ತಂದೊಯ್ಯುವರ್
ದುಂಡು ಮೇಜಿನ ಸುತ್ತ ಡಿವಿಡೆಂಡ್ ಹಂಚಿಕೊಂಡವರವರ
ಪಾಲಿನಂತೆ ॥೯॥

ಬಣ್ಣ ನೂರೆಂಟಿರುವ ತುದಿಗಳ
ಕಣ್ಣ ಕೋರಯಿಸುವ ಮಹಾ ನಾ—
ಸಾರ್ಣವವೊ ಎನೆ ತೋರುವುದು ಈ ಜನರ ಸಂಮೇಳ ।
ಅಣ್ಣತನಕೆಲ್ಲವರು ಸಿದ್ಧ, ಪ—
ರಾನ್ನ–ಚಿನ್ನಗಳನ್ನೆ ಬಯಸುವ
ನಿರ್ಣಯಾತ್ಮಕ ಬುದ್ಧಿಯುಳ್ಳ ಪ್ರಜೆಗಳಿಂದೋಳ ॥ ೧೦ ॥

ಎಲ್ಲ ನೌಕರರಿಲ್ಲಿ ಕಲಿತಂಥ—ಅಧಿಕಾರಿಗಳ ಕೈ-
ಗೆಲ್ಲ ಗಮ್ಮಂಟಿಹುದು ನೋಟುಗಳ ।
ಗಲ್ಲದಲ್ಲೆಣಿಸುತಿರೆ ಗ್ರಾಂಟಾ-
ದೆಲ್ಲ ಮೊತ್ತವ ಹಂಚುವಲ್ಲೂ—
ಹಲ್ಲುಂ ಕಿರಿವರು ಮೂಗು ಮುರಿವರು
ಎಲ್ಲ ಹಣ ಬೇಕೆಂಬ ಜನರಿರೆ ॥ ೧೧ ॥

ಹಣದ ವಾಸನೆ ಹಿಡಿವ ಕಲಿಯುಲ್ಲಿ— ಮೂಗಿಗರವರು ಹೆ-
ಗ್ಗಣಗಳೂ ಸೋತಾವು ತಿರಿಯಿರಿವ ।
ವ್ರಣದಿನುಪಜೀವಿಸುವ ಕೃಮಿಗಳ
ಬಣಗಳಂದದಿ ಜನರ ಜೇಬನು
ಚಣಚಣಕ್ಕೂ ಹಗುರುಗೊಳಿಸುವ
ವಿನಯ ತಂತ್ರಜ್ಞರಿಗೆ ಸಹಜವೊ ॥ ೧೨ ॥

ಎಲ್ಲರೂ ಸ್ವಾತಂತ್ರ್ಯರಸದವರು — ನೇತಾರರಲ್ಲೂ
ಗುಮ್ಮಗುಸುಂಕರೆ ಗಣ್ಯರಾಗಿಹರು ।
ಎಲ್ಲ ವರ್ಗಗಳಲ್ಲು ಕಪಿಗಳು
ಎಲ್ಲರಲ್ಲೂ ವಾದಿ-ವಾಗ್ಮಿಗ-
ಳೆಲ್ಲರೂ ಮೂಗುದ್ದ ಮಾಡಿಯೆ
ಸುಂಯೆನುವ ಮಾಧ್ಯಮವ ಹಿಡಿವರು ॥ ೧೩ ॥

ಲಂಚನಾಸಗೆ ಸೀನು ಬಂದರೆ ಕಂಬಗಳು ಬಿದ್ದುರುಳ್ವವು
ಲಂಚಿಸುವುದೇ ಕಾರ್ಯಗೌರವ, ಲಂಬ ಚರ್ಚೆಗಳೇಳ್ವವು ।
ಕುಂಭಿನಿಯೊಳಿಹ ನುಸಿಯು ಬಗೆಗೂ ಕುಳಿತಕಡೆಯಲ್ಲೆಲ್ಲವೂ
ಹಂಚಲೆಂಬತಿ ತುಟ್ಟಿ ವಸ್ತುವ ಕಳಿಸದಾವ ವಿದೇಶವೊ ॥ ೧೪ ॥

ನಂಬಿಗೆಯು ಮರೆವವರು ಕೆಲವರು, ಮಾತಮರೆವವರನ್ಯರು
ತಂಬಿಗೆಯು ಮರೆವವರು ಬಯಲಿಗೆ ಹೋಗುವಾಗ ವಮಾನ್ಯರು ।
ರಂಭೆ-ರಸ-ರವೆ ತಿಂಡಿಯಿಂದುರಿರೆ ಕೆಲಸ ಮರೆವವರಿತರರು
ಜಂಭವಲ್ಲೆಲ್ಲವನು ಮರೆವರು ಜೋರಿನಧಿಕಾರಸ್ಥರು ॥ ೧೫ ॥

ಕಣ್ಣಂ ಮರೆಪರ್ ಕೆಲವರ್
ಕಿವಿಯುಂ ಮೇಣ್ ಲಂಬನಾಸಿಕಮನಿನ್ನನ್ಯರ್ ।
ಪಣ್ಣಂ ಹೂವಂ ಮರೆವರ್
ತನ್ನನ್ನೇ ಮರೆವರಧಿಕ ಹೊಣೆಗಾರರ್ಕಳ್ ॥ ೧೬ ॥

ಹೃದಯಮನನ್ಯರ್ ನೆನೆಯರ್
ವಿಧಿವತ್ತೆಯನನಿಬರೆಲ್ಲರದೊಳಿಡಲರಿಯರ್ ।
ಮದನಮನೀಕ್ಷಿಸದಿರ್ಪರ್
ಮನುಜಮನೊಲಿಸಿರ್ಪರನ್ಯಲಕ್ಷ್ಮೀಜಯದೊಳ್ ॥ ೧೭ ॥

ಕರ್ತವ್ಯವನು ಮರೆವ ರಡ್ಡ ಬಂದಿರೆ ನಾಸ
ದರ್ತವ್ಯ ಕಣ್ಣಿದ್ದುರ್ ಕಾಣುತಿರೆ ಕಲ್ಪಿಸಿದ,
ವರ್ತಮಾನವ ಮರೆವರರ್ಥ ಚಿಂತನದೊಳಿರೆ, ಚಿತ್ತಕ್ಕೆ ನಿಮಿನಿಮಿಷಕೂ ।
ಪಥ್ಯವಾಗುವ ವಸ್ತು ಬೇರೆ ಬೇರೆ, ನಿರರ್ಥ
ಕೃತ್ಯದಲ್ಲರ್ಥವಂ ಕಾಂಬ ಚತುರರ್ ರಾಜ್ಯ
ಭೃತ್ಯೋತ್ತಮರ್ ನೃತ್ಯಕೋವಿದರ್ ಶ್ರೀ ಸ್ವಪ್ನಮಂಸಕರ್
ಮರ್ತನೆಯಂ ॥೧೮॥


ಒಂದು ಸಭೆಯುಳ್ಳೊಬ್ಬ ಮೂಗೆತ್ತಿ ಹೇಳಿದನು
ಬಂದ ಬಂದವರೆಲ್ಲ ಮೂಗಿಂದ ಕುಸ್ತಿಗ್ಯ-
ನಂದ ಮಂ ತೋರಬೇಕೆಂದು ಆ ಜಂಗಿ ಕುಸ್ತಿಯು ಬಗೆಯನೇರ್ಪೊಗಳ್ದನು।
ಅಂದಾ ವಿಧಾನ ಸಭೆ ಮಾಡಿದ ವಿಧಾನವನು
ಮುಂದಿನೆಲ್ಲಾ ಸಭೆಗಳೂ ಪಾಲಿಸಿದವೆನಲ್
ಇಂದು ನೋಡಿದ ವಿದೇಶೀಯ ರಾಯಸದವರ್ ಮೂಗಿನಲಿ
ಬೆರಳಿಟ್ಟರು ॥೧೯॥

ಜನಧನವ ಕಲ್ಲುಹರಳಂತೆ ಬೇಕಾದವರ
ತನಯಾದಿ ಬಾಂಧವರ ಖಾಸಗಿಯ ಬೊಕ್ಕಸಕೆ
ಬಿರಿಸಿ ತೂರುವ ಯೋಜನಾವಳಿಯ ಮನಬಂದ ಹಾಗೆ ನಡೆಸುತ್ತಲಿರುವ।
ಜನಸೇವೆಗೆಣೆಯುಂಟೆ ಪಾರ್ಲಿಮೆಂಟೀಶ್ವರರ

ಜನ ಮಹಾಘ್ರಾಣಮತಿ ತೊಗಲಬಿಸಲಿದ್ದುದಂ
ಪ್ರಧಾನದಿಂದರಿತ ವೈದೇಶಿಕರ್ ಗಡಿಯ ನಾಕ್ರಮಿಸಿದರ್ ಮೆಲ್ಲನೆ ॥೨೦॥

ಅನುಕೂಲವೊಂದೊಂದ ಕಸಿಯುತ್ತ ಮತ್ತವರ್
ಜನಪಾಲ ಮುಖ್ಯನುದ್ದಾಮ ನಾಸಿಕವನ್ನು
ಕೆಣಕಿ ಸಂತಯಿಸುತ್ತ ನಗುತಿದ್ದರೊಳಗೊಳಗೆ, ಸುರೆ ಕುಡಿಸಿ ವಾರಾಂಗನೆ|
ಜತೆಯಾಡಬಂದವನ ಹಣವ ಸುಲಿಯುವ ಹಾಗೆ
ಜಣಿಸುತ್ತಲಿದ್ದರೂ ಸಹಮಂತ್ರಿಗಳು ಹೊಗಳಿ
ಜಣಕಿತ್ತು ದೇಶೀಯ ಜನರ ಬಾಲವ ಚಿಲ್ಲುಮಾಡಿ ಸಂತಸಬಟ್ಟರು ॥೨೧॥

ಮಾನವ್ರ ಮುಖ. ಬುದ್ಧಿ ಕಪಿಯದದರೊಳಗೆ, ಮೋ-
ಹಾನವ್ಯ ನಿರ್ಗಂಧ ಮುಖಿನಾಸ ಮಾನಸದ
ಮಾನ ವಿ-ಮುಖತೆಯ ಸೂಚಿಸುತಿರಲ್ ಶ್ವಾನಯುಗ ನಾನಾ ಪ್ರಕಾರದಿಂದ
ಜಾನುಲಿಯ ಮೂಲಕ ಪ್ರಚುರ ಪಡಿಸಿದ ಮೂಗಿ-
ನಾಣತಿಯನೋದಿ ಕೇಳಿದ ಸುಂದರಾನನರ
ಶೀನು ಮೂಗಿಂದ ಮೂಲೋಕಮಂ ನಡುಗಿಸುಗು
ದೈತ್ಯಪ್ರಮಾಣದಿಂದ ॥೨೨॥



ಜಿಹ್ವಾಪ್ರಜ್ಞಾವಿಲಾಸ ವೆಂಬ ಎರಡನೆಯ ಸರ್ಗ

The WORLD of Linguiles

ಮಧುಪ್ರಭೃತಿ ಸಪ್ತಸಿಂಧುಗಳನು ಕಡೆದು ತೆಗೆದುದು
ಅದಮ್ಯ ಹೃತ್ತಾಪಹಾರಿ ವಿಧುಚಿಕಿತ್ಸೆಗೆಣೆಯಿದು ।
ಪದಸ್ಥ ಸಂಗ್ರಹ್ಯವಾದ ಬುತ್ತಿಯೆನಿಸಿ ಮೆರೆವುದು
ಗದಾಗದ ಮಹೋಪದಾಖ್ಯ ಸುಧಾಸಾರ ಕರೆವುದು ॥ ೧ ॥

ದಶಮರಸಪಾವುದೆನಲೀ
ಹೊಸರಾಜ್ಯದೊಳತ್ತಲಿತ್ತ ಶೋಧಿಸಿ ನೋಡಲ್ ।
ದೆಸೆದೆಸೆಗ ಮರ್ಕ ಪರಿವ
ಪ್ರಶಸ್ತ ಲಂಚಂ ರುಚಿಜ್ಞರಿಗೆ ದೊರೆಕೊಳ್ಗುಂ ॥ ೨ ॥

ಈ ನಾಡವರ್ಗಳ್ ಚಪಲರ್
ಪಾನಪ್ರಿಯ ಪರಮರಸಿಕ ಭೋಗಾತ್ತಫಲರ್ ।
ದಾನದ ದೋಸೆಗೆ ದುಡಿವರ್
ಶ್ವಾನಾಧಿಕ ಮಾನರತ್ಯಧಿಕ ಮಡಿವಂತರ್ ॥ ೩ ॥

ಕತ್ತರಿಪೇಟಾ ಕುಡಿವುದು ಘೋಟಾ
ವಿತ್ತದ ಹಸಿವಿನ ಪಿತ್ತ ವಿರಾಟಾ ।
"ಗಾಂಧೀ ಟೋಪೀ ಕುಡಿ ಬಿಳಿಕಾಫೀ"
ಎಂಬುದರರ್ಥವ ಹೇಳೋ ಪಾಪೀ ॥ ೪ ॥

ಅಂಗಣ್ಣಂ ನುಂಗಣ್ಣಂ
ಅಂಗಿಯ ತೆಗೆದಾಗಳರಸುದೊಳ್ಳಿನ ಸೊಬಗು ।
ರಂಗಸ್ಥಳದೊಳ ಮುದ್ದದ
ಚೆಂಗಾವಿಯ ಜಿಹ್ವೆ ಹನಿಸೆ ಲಾಲಾರಸಮಂ ॥ ೫ ॥

ಹಣ್ಣನ್ನಲ್ಲದೆ ಕೋರ್ಟಿನ
ಬಣ್ಣದ ಕಾಗದವನಿರದೆ ನುಂಗುವ ಜಾಣಂ |
ಅಣ್ಣರೊಳಣ್ಣಂ ನಾಡಿನ
ಕಣ್ಣೆಂದೇ ಪೂಜೆಗೆಯ್ವ ರಾಯುತಜಿಹ್ವರ್ ॥ ೬ ॥

ಸಾಮಾನುಗಳಂ ತಿನ್ನುವ
ಸಾಮಾನ್ಯರ ಜೊತೆಗೆ ಲೆಕ್ಕಪತ್ರವ ತಿಂಬ ।
ಗ್ರಾಮಣಿ ಬುದ್ಧಿಯ ನೌಕರ-
ಧಾಮಂ ಜಿಹ್ವಾಧಿನಾಥ ರಾಜ್ಯಸ್ತೋಮಂ ॥ ೭ ॥

ಜೋಲುನಾಲಗೆ, ತೇಲುನಾಲಗೆ, ಹಾಳುನಾಲಗೆ, ಕೀಳುನಾಲಗೆ
ಮಾಲುಗಳ ನಿದ್ದಲ್ಲಿ ನುಂಗುವ ಕಾಳನಾಲಗೆಯ ।
ಶೀಲವಂತಿಕೆಯನ್ನು ಹೊಗಳುಗು ಜೂರುರೊಟ್ಟಿಯನೊಗೆವ ಕೂಡಲಿ
ಜಾಲವಂತಲ್ಲಾಡಿ ಲೀಲೆಯ ತೋರಿ ಬಗೆಬಗೆಯ ॥ ೮ ॥

ಹರಿತಿಂಬಂ ಹರ ತಿಂಬಂ
ದೊರೆ ತಿಂಬಂ ಧೂಮಕೇತು ತಿಂಬಂ ತಿರೆಯ ।
ಕುರಿವಾನಿಸ ನೆಸಗಿದುದಂ
ಪರಮಾರ್ಥಮಿದಕ್ಕದಾವನಿನ್ನುಡಿಪಪನೋ ! ॥ ೯ ॥

ಕುಲವ ನಾಲಗೆ ಯುರುಹುಗು
ಬಲವ ನಾಲಗೆ ತಿಳುಹುಗು ।
ಛಲವ ನಾಲಗೆ ತೋರುಗು—
ಹೊಲವ ಜೇಲಿಗೆ ಮಾರುಗು ॥ ೧೦ ॥

ರಕ್ಷಿಗಳೆ ಭಕ್ಷಿಗಳು ರಾಜ್ಯದಿ, ಕುಕ್ಷಿಪರ್ಧನ ಶಿಕ್ಷಣ
ಅಕ್ಷರವ ಬರೆವಾಗಳೂ ನುಂಗಾಟ ಸದಮಲ ಲಕ್ಷಣ ।
ಮಾಕ್ಷಿಕಾಮುಪ್ರಾಣಿಪಕ್ಷಣ ಲೋಟಿಸುವ ಸಂಪತ್‌ಕ್ಷಣ
ಶಿಕ್ಷಕರ ಜಿಹ್ವೆಗಳ ಬಾಧಿಸಲಕ್ಕು ತೆತ್ತೂ ಬಾಬು ಹಣ ॥ ೧೧ ॥

ಜಿಹ್ವೆಯುದ್ಧದೆ ಮಾನ್ಯತಾಮಾನ-ಸಂಮೋಹನಗಳಿ
ಕಾಫಿತಿಂಡಿಯು ತಿಂಬುದೇ ತ್ರಾಣ ।
ಬಹ್ವಜಗಳಿಹ ವನ ಕವಿದ ಗಿರಿ-
ಗಹ್ವರಗಳಲಿ ಬೆಳೆದ ಗಿಡದೊಳು
ಎಲ್ಲ ರೆಂಬೆಗಳಲ್ಲು ಸೊಪ್ಪೊಂ
ದಿಲ್ಲವಾಗುವುದಲ್ಲವೇ ಮಗು ? || ೧೨ ||

ಬುಡತನಕ ನೆಕ್ಕಿರಲು ಬಡಜನದ—ಬಡಕೋಟಿಪಲ್ಲವ
ಪಡೆಯಲದರಿಂದೀಯ ಬೇಕದಕೆ ।
ಕೊಡುಗೆಗಳ ಸಾಲಗಳ ದಾನದ
ಪಡಗೆಗಳ ಸಂಬಂಧ ಗಳಿಗೆಯೊ-
ಳಡಗಡೆಗೆ ಬೈತಿಟ್ಟು ಪಾಲನು
ಕೊಡುವ ಪನ್ನಾಲಗೆಗಳಿರುವರು || ೧೩ ||

ದೋಸೆಗಳ ಲಗ್ಗೆಗಳ ತಿಂಬವರು — ಕೆಲಕೆಲವರಾದರೆ
ಆಸೆತೀರಿಸಲಿಡಲಿಗಳ ಕೆಲರು ।
ಲೇಸಿಗೆಂದೇ ಪ್ರಜೆಗಳಿಂದಾ
ಕೇಸರಿಯಭಾತನ್ನು ಕಸಿವರು —
ಬಾಸೆ-ಬಳಸದ "ಕೈಬಡಿಗೆ"ಗಳ
ನೇಸೊಕೊಂಬರು ಜೊತೆಗೆ ಕಾರ್ಯದಿ || ೧೪ ||

ನೆಕ್ಕಿ ಪಡೆವರು ಹೆಸರ ರತ್ನವ
ನೆಕ್ಕಿ ಪಡೆವರು ಹಾರಹೊರೆಗಳ
ನೆಕ್ಕಿ ಪಡೆವರು ಸ್ಥಾನಮಾನ ಮಹೋದ್ಯಮಾದಿಗಳ ।
"ಲಿಕ್ ಎಬವ್" ಮೋರ್ "ಕಿಕ್ ಬಿಲೋ" ಎಂ
ಬಕ್ಕಲಿಗತನದಿಂದ ರಾಜ್ಯದ
ಪಕ್ಕವನೆ ಮುರಿದಾಳುತಿಹರೀ ಜಿಹ್ವೆಯಾಳುಗಳು || ೧೫ ||

ಮಕ್ಕಳ ಮೊಮ್ಮಕ್ಕಳ ಜೀ
ವಕ್ಕೊಳಿತೆಂದಾಸ್ತಿ ಮಾಡುವುದಕಿತಿಮಿತಿಯೆ ?
ನೆಕ್ಕಿಗರಾ ಲೆಕ್ಕಿಗರವ
ರಕ್ಕನ ಮನೆಗಂಟು ಜನರ ತೆರಿಗೆಯ ಮೊತ್ತಂ ॥ ೧೬ ॥

ಪುತ್ರೀ ಪುತ್ರಪ್ರೇಮದ
ಭಸ್ತ್ರಿಕೆಯಾ ಕಾಯುವಡುಸುತಿರೆ ಹೆಮ್ಮುಪ್ಪಂ ।
ಕುತ್ರಾಪಿ ದೇಶಚಿಂತೆಯು
ಸೆತ್ತ್ರರ್ವನಿ ಕಾಣಸಿಗದು ವೈಶ್ಯಾವಳಿಯ ॥ ೧೭ ॥

ಕೊಳ್ಳುವ ಮಾರುವ ಹಂಚುವ
ದಲ್ಲಾಲಿಗಳೊಲ್ಲೆವೆಂಬರೇ ನಾ ಲಕ್ಷ್ಮಿ ।
ಬೆಲ್ಲದವೊಲ್ ನಾಲಗೆಯೋರ್ —
ದುಲ್ಲಾಸದಿಸೆಳೆಯ ತೊಡಗೆ ಗಂಟಲಗುಳಿಯೊಳ್ ॥ ೧೮ ॥

ನೆಕ್ಕಿ ಕಂಡುದೆ ನನ್ನಿ, ನಂಬಲದೆ ಯೋಗ್ಯ
ನೆಕ್ಕಿ ಕೊಂಡುದೆ ಚಿನ್ನ ಆಭರಣಭಾಗ್ಯ ।
ನೆಕ್ಕಿ ಮೈಗರಿವಾಗದಂತನ್ಯರೊಡವೆಗಳ
ದಕ್ಕಿಸಿದರವೆ ದಿವ್ಯವಾದ ಭೋಗ್ಯ ॥ ೧೯ ॥

ಮೇಲಿನವರೆಕ್ಕಡವ ನೆಕ್ಕುವ
ಮೂಲವಿದ್ಯೆಯ ದರ್ಪವಂತಿಕೆ
ಶೀಲವೀರಾಷ್ಟ್ರದಲಿ ಸೇವಾಯೋಗ ಹಿಡಿದವರ ।
ನಾಲಗೆಯು ನೀಳ್ಪಡತೆ ನಾಗರಿ-
ಕಾಲಯುಗಳಲಿ ಮೆರೆಗು ಭೋಗಾಂ
ದೋಲಿಕಾರೂಢಪ್ರತಾಪದ ಮೇಲೆ ಮತ್ತುಂಟೆ? ॥ ೨೦ ॥

ಹತ್ತು ನಾಲಗೆಗಳನು ಹೊತ್ತವ-
ರೆತ್ತ ಹೋದರು, ನೂರು ಸಾವಿರ
ಹುತ್ತಗಳಿನೊಂದೊಂದು ಕಾಯದಿನೇಳ್ವ **ಜಿಹ್ವೆಗಳ** ।
ಬಿತ್ತರದ ಬೀಸಾಟದಲಿ ತಲೆ-
ಯೆತ್ತಲೆಂತೊನ್ನಾಲಿಗೆಗ? ಸಾ-
ಯುತ್ತಲೇ ಬದುಕಿರುವ ಸ್ವಾರಾಜ್ಯಾನುಭವವವಗೆ ॥ ೨೧ ॥

"ಮರಣಂ ಪ್ರಕೃತಿ: ಶರೀರಿಣಾಂ
ವಿಕೃತಿರ್ಜೀವಿತಮುಚ್ಯತೇ ಬುಧೈ: ।
ಕ್ಷಣಮಪ್ಯವತಿಷ್ಠತೇ ಶ್ವಸನ್
ಯದಿ ಜಂತುರ್ನನು ಲಾಭವಾನಸೌ"
ಚಾಪೆನಾಲಗೆ-ಗೆರಿಸೆನಾಲಗೆಗಳುಳ್ಳವರ,
ಪಾಪಕಾಣದ ಹಾಗೆ ಚಪ್ಪರಿಸಿ ನುಂಗುವರ
ರೂಪಾತಿಶಯವ ಬಣ್ಣಿಸಲು ಬಂಗಲದಾ ಕಾಪಾಲಿಕನೆ ಶಕ್ತನು ।
ಆಪತ್ತಿನಲ್ಲನ್ಯರಾನಂದವನು ಕಾಂಬ
ರಾಪಿಂದ ಗೌರವವ ಮೆರೆಯಿಸುವ ಶಕವಿದಹ
ಭಾಷ್ಪ ಭಾಷೆನೆ ಚತುರ್ದಶಲೋಕವವರೆಲ್ಲ ದೀರ್ಘಜಿಹ್ವೆಗಳ
ಚಾಚಿ ॥೨೨॥

ಕರ್ಣಪ್ರಜ್ಞಾವಿಲಾಸವೆಂಬ ಮೂರನೆಯ ಸರ್ಗ

The World of Audiles

ಚಾಡಿದೇವರ ಭಕ್ತರು ಉಂ
ಡಾಡಿಗಳ ಸಂಜಾತರು.
ಮಾಡಿದುದ ಮರೆತಿರುಪರು-ಮಾ
ತಾಡಿದರೆ ಮುನಿದೇಳ್ವರು ॥ ೧ ॥

ಈ ಕರ್ಣರಾಜ್ಯದಲ್ಲಿ ಕಿವಿಗಲ್ಲದೆ ಕಣ್ಣಿಗೆ ಪ್ರಾಧಾನ್ಯವಿಲ್ಲ;
ಆದುದರಿಂದ —

ಧೃತರಾಷ್ಟ್ರರೆಲ್ಲರುಂ ಪರ-
ಹಿತದತ್ತಲ್, ಸ್ವಹಿತವೊಂದೆ ಸತತಾರಾಧ್ಯಂ ।
ಸ್ಥಿತಿವಂತ ರಾಯರುಗಳಂ
ಶತಪ್ರಯತ್ನಂಗಳಿಂದೆ ಸೇವಿಸಿ ಬಾಳ್ವರ್ ॥ ೨ ॥

ಹಿತ್ತಾಳಿಯ ಕಿವಿಯವರೇ
ಉತ್ತಮರೀ ರಾಜ್ಯದೊಳ್ ಪ್ರಕಾಶಕರವರೇ ।
ಹತ್ತಿರದೊಳ್ ಕರ್ಣೇಜಪ-
ಸತ್ತ್ರಮನಾಘರಿಸಿ ವಸ್ತು ಸತ್ಯಮನರಿವರ್ ॥ ೩ ॥

ಅವರ ದೇವತೆಯಾದರೋ —

"She is not old, She is not young
The woman with the Serpent's Ear
Who slights the worthiest in the land
Sneers at the just condemns the brave
And blackens goodness in its grave" ॥ ೪ ॥

ದುರ್ವೃತ್ತಶ್ರುತಿಚಪಲಾ
ಕರ್ಣೇ ವಿಷದಂಶನೀ ಸರೀಸೃಪ್ರಕರ್ಣಾ ।
ದುರ್ವಾರ್ಯರುಚಿರಮಂಗಲ-
ಚರ್ಯಾ ಸಾ ದೇವತಾ ದುರತ್ಯಯಮಾಯಾ ॥ ೪ ॥

ಕಿವಿನಾಡಿದು ಕಿವಿಯಿರದವ
ಕವಿಯೆಂದರ್ಚಿತನು ಚಿತ್ರವೀ ಅಪವಾದಂ ।
ಕಿವಿಕಚ್ಚುವ ಕಿವಿಚುಚ್ಚುವ
ಸವಿ ಸರ್ಪಾಕರ್ಷಣಂ ವಿನಾಯಕವರರೊಳ್ ॥ ೫ ॥

ಆದೇವತೆಯ ಭಜಕರಾದರಾತಿಥ್ಯಗಳ
ಸ್ವಾದಜ್ಞರಾಗಿಹರ್ ಯಂತ್ರಮುಸ್ತಿಷ್ಕರಾ-
ಪಾದಕರ್ಣರ್ ಕಿವಿಗಳವಯವಗಳೆಲ್ಲಮಂ ಹತ್ತಿಕ್ಕಿ ರಾಜ್ಯವಾಳ್ಗು ।

ನಾದ ವಿಕಟ ಪ್ರತಾಪರ್ ಕಲಹಲಂಪಟರ್
ವಾದವೆಲ್ಲ ವಿತಂಡೆ ಮತದಾರರೊಳ್ ಕೂಡ
ಮೇಧಾವಿಗಳ್ ಕದ್ದು ಕೇಳಿ ಕಜ್ಜಕ್ಕಿಳಿವ ಸ್ವಾರ್ಥಕಾರ್ಯ-ವಿಶಾರದರ್ ॥ ೬ ॥

ಕಂಡದ್ದ ನಂಬರಾರುಂ
ಗುಂಡರ್ ಗಂಡರ್ ಶ್ರುತಿಪ್ರಧಾನರ್ ಚದುರರ್ ।
ಮುಂಡೆಗಳ ಗಾತ್ರವುಂಡೆಯು-
ದಂಡಲೆವರ, ಪುಟ್ಟಿಸಿಂದರ ಪ್ರತಿಮಾರರ್ ॥ ೭ ॥

ಕೇಳಿದ್ದಷ್ಟೇ ವೇದಂ
ಕೇಳಿದ್ದಂ ಪೇಳಿ ಹರಟುತಿರುವುದೆ ಧರ್ಮಂ।
ಮಂಊಲಕ್ಕಾರುಂ ಪೋಗರ್
ಬಾಲದವೊಲ್ ಕಿವಿಯನೆಲ್ಲರಲ್ಲಾಡಿಸುವರ್ ॥ ೮ ॥

ವರದಿಗಳ ನಂಬಿ ನಡೆವರ್
ಪರೋಕ್ಷಕಿಂತ ಪ್ರಮಾಣ ಮಾವುದುಮಿಲ್ಲಂ ।
ಹರಿಹರಪದದೆ ವಿಭಕ್ತರ್
ಹಿರಿಕಿರಿಯರ್ ವರ್ಗಜಾತಿವೈರೋನ್ಮತ್ತರ್ ॥ ೯ ॥

ಕರ್ಣಾಟದಧಟರನ್ಯರ್
ವರ್ಣಿಸಿದುದನೆಲ್ಲಮಂ ಕರಂ ಸ್ವೀಕರಿಸಲ್ ।
ನಿರ್ಣಯಿಸಿದ ರಣಧೀರರ್
ಕರ್ಣಮಾತ್ರರ್ ಕರ್ಣಕಾರ ಗಂಧರ್ ನರರೊಳ್ ॥ ೧೦ ॥

ಶಬ್ದಾಬ್ಧಿತಿಮಿಂಗಿಲಗಳ್
ಉಬ್ಬಿರ್ ಸ್ವಜನರ್ಗೆ ಪರರಿಗಿನತನುಜಾತರ್ ।
ಶುದ್ಧಾಶುದ್ಧ ವಿವೇಕಕ-
ಬದ್ಧರ್ ಛವಿಗಳ್ ಸಮುಚ್ಛ್ರಿತಪ್ತರ್ ಪಾರ್ವರ್ ॥ ೧೧ ॥

ಅಂಥವರ ಮೆಟ್ಟಿ ಮುಂರಿಯುವ
ಪಂಥಂ ಮೊರಗಿವಿಯು ಗಣ್ಯಸಂಖ್ಯರ ನಿರತಂ ।
ಶಾಂತಂ ಪಾಪಮಶಾಂತಂ
ಕಾಂತಂ ಕಾಮೋಪಜೀವನಂ ಶ್ರೇಯಸ್ಕಂ ॥ ೧೨ ॥

ಎಂಬತಿರಥರಂ ನಂಬಿದ
ಕುಂಭೋದರರಂ ಪ್ರಗಲ್ಭರೆಂಬರ್ ದೊರೆಗಳ್ ।
ಲಂಬಾಯುತ ಮುಖನೇತ್ರರ್
ಸಂಬಳದಾಳ್ಗಳ್ ಶ್ರುತಿಪ್ರಮಾಣರ ನಾಡೊಳ್ ॥ ೧೩ ॥

ಹೆಡಗೆಗಿವಿ, ಕೊಡೆಗಿವಿ, ಮೊರಂಗಳ
ಒಡಿದು ಹಚ್ಚಿರುವಂತೆ ತೋರುವ
ಒಡೆಯುಗಿವಿ, ಒಕ್ಕಲಿನ ಗುದ್ದಲಿಗಿವಿ—ಅದೊಂದೆರಡೇ ? ।
ಹಿಡಿದ ಪಟ್ಟನು ಬಿಡದ ಹೆಗ್ಗಿವಿ

ನುಡಿದ ನನ್ನಿಯ ನುಂಗುವೊಳಗಿವಿ
ಬಿಡದೆ ಬೆನ್ನಟ್ಟುವ ಯಮೋಪಮ ಬೇಹುಗಾರಗಿವಿ ॥ ೧೪ ॥

ಬೆಪ್ಪುಗಿವಿ, ಚಪ್ಪೆಗಿವಿ, ಹುಪ್ಪುಗಿವಿ, ಹಾಳುಗಿವಿ
ತಿಪ್ಪುಗಿವಿ, ತಿನ್ನುಗಿವಿ, ಜರಲೆಗಿವಿ, ತರಲೆಗಿವಿ
ತಪ್ಪುಗಿವಿ, ತಾಳ್ಗಿವಿ, ತನ್ನ ದನಿಯನ್ನಷ್ಟೆ
ಮೆಚ್ಚುವುಚ್ಚಾತ್ಮಗಿವಿಯುಂ ।

ಚಿಪ್ಪು ಪೆಕ್ಕುವ ಜಾರರವಿಂಟುವಪ್ಪುಗಿವಿ
ಜಪ್ಪಿ ಜನಪದರಾಜ್ಯಗೈವ ಕಾಲದೊಳಿಂದು
ಅಪ್ಪಚ್ಚಿಯಮ್ಮಣ್ಣೆ ಎರಡನೂ ಕಳಕೊಂಡ ತಿಪ್ಪೆಗಿವಿ
ಬಡವರ್ಕಳ ॥ ೧೫ ॥

ಖಗದೇವರ ಮಿಗದೇವರ
ಹೊಗೆದೇವರ ಹೊಟ್ಟೆದೇವರಾರಾಧಕರಾ ।
ಹಗರಣಿಗರ್ ಹಳ್ಳಿಗಳೊಳ್
ಹಗಲನ್ನಿರುಳೆಂದು ನಂಬುವಂತೆಸಗಿದಪರ್ ॥ ೧೬ ॥

ಅಬುಧರ ಕಿವಿಯುಗಲವನಳೆ-
ವಬುಧಿಯನೀಸುವ ಹಿಮಾಲಯದ ಹೊರೆಹೊರುವ ।
ಕಬಳಿಪನಿದ್ದರೆ ಕಲ್ಗಳ
ನಭಃಸ್ಪೃಗಾದೀತು ಕೀರ್ತಿಯಾತನದೀಗಳೊಳ್ ॥ ೧೭ ॥

ಆ ಕಿವಿಯು ಹೊಕ್ಕು ಮತ್ತೀ ಕಿವಿಯು ತೂತಿಂದ
ಬೇಕಾಗದಿದ್ದ ಮಾತುಗಳು ಹೊರಬಿದ್ದಾವು
ನಾಕು-ಜನರೆದುರು ಮುಂದಾಳೆಂದುಕೊಂಬ ಹಿರೀಕರ್ಣಾಗ್ರಗಣ್ಯರಲ್ಲಿ
ಮೂಕ ಕೋಟಿಯು ಹಾಗೆ ಕರ್ಣಗತಭಾವನಾ
ಸಾಕಲ್ಯದಿಂ ಮೆರೆವ ನಾಯಕರ ನಡೆಯಿಂದ
ಶೋಕಕ್ಕೆ ಬಾಯಿ ಮೂಕಂಬೊಲಾಯ್ತನ್ಯಾಯಗೀರ್ಣ ಸಾಕ್ಷರ
ಬಡವರ ॥ ೧೮ ॥

ಹಣೆಯು ಬರೆಹವಿದೆಂದು ಹಲವರು
ಎಣಿಸಿದರೆ ಕಿವಿಯುರಸನಾಳ್ಕೆಯು
ತಣಿವರವನಧಿಕಾರಿಗಳು ಹಣವಿನಿಗಳಗ್ರಜರು ।
ಹಣವಗಳಿಸುವರವರ ಬಗೆಯುಲಿ
ದಣಿದವರ ಸುಲಿದನ್ಯರಹಹಾ
ಮಣಿಯುರಾರೀ ಓಂದುಗಳ ಓಂದುಳಿವ ಸಾಹಸಕೆ ॥ ೧೯ ॥

ಹುಟ್ಟು ಬೆಳೆಯುವ ಬೆಳೆಯಿರೆಂದು ನಾಯಕರುಸಿರೆ
ಹುಟ್ಟು ಕಿವಿ ಲಕ್ಷಿಸದು, ಕಡಿಮೆ ಮಕ್ಕಳ ಹಡೆಯಿ–
ರುಟ್ಟು ಮೆಟ್ಟಿಸ ಬಾಂಧವರೆ ಎನಲು ಕೇಳಿಸದು ಏಕೆಂದು ನೀವ್ ಬಲ್ಲಿರಾ?
ಉಟ್ಟರೂ ಸ್ವಾರ್ಥಿಗಳು ಅವರನನುಸರಿಸುತಿಹ
ಲುಟ್ಟರೂ ಸ್ವಾರ್ಥಿಗಳು ಲಂಬಕರ್ಣರ ದೇವ
ಮೆಟ್ಟು ಕಡಿಮೆಯು ಮಾಡಲಿಲ್ಲ-ಸರಕಾರ ಮೇಣ್ ಪ್ರಜೆಗಳಾಚಾರದಲ್ಲಿ ॥೨೦॥

ಕಿವಿಯು ಅಗಲ ಉದ್ದ ದೇಹದಿತರಭಾಗಕಿಂತಲೂ
ಋಷಿಯು ಜನರೊಳಗ್ರಗಣ್ಯ; ಹೃದಯ ಗಾಢ. ನರಗಳೋ
ಮರಿಗಳಷ್ಟು ಶಿಥಿಲ ಕತ್ತರಿಸಿದ, ಕರ್ಮಕಾಂಡದ
ಜರಠತೆ ಉರಿ ತಣಿಸೀತೇ ಹೊಟ್ಟೆಯಗ್ನಿ ಕುಂಡದ ॥
ಐವತ್ತು ಕೋಟಿ ನರವಿಲ್ಲದಿಹ ನರರೊಟ್ಟು
ಐವಜಿನ ಕಿವಿಯು ಸರಕಾರ ರಚಿಸಿ
ಹಲವಿಧ ಸುಧಾರಣೆಯ ಹುಯ್ಯಲೆಬ್ಬಿಸಿದಾಗ
ಕುಲಗುಣವ ಬಿಟ್ಟೀತೆ ಕಿವುಡುಗಿವಿಯು? ॥೨೧॥

ಆ ಅದೂ ಕೇಳದೇ ಇದೂ ಕೇಳದೋ ಉದೂ ಕೇಳದೀಗ
ಯಾವುದೂ ಕೇಳದಮುಕ್ತರಿದಂಥ ಕಿವಿಗಳಿಗೆ ಶಾಂತಿಯೋಗ ।
ಹಾವನೂ ಮುರಿಸಿದ ಶಬ್ದವಿಮುಖಿರಧಿಕಾರ ದರ್ಪದಲ್ಲಿ
ನೀವನ್ನು ತಿಂದು ಬದುಕುವುದಕಂಜಿದರೆ ಕೊರಳಿಗೊಂದೆ ಬಳ್ಳಿ ॥
ಈ ಜಗದ ವಿಕಟ ಸಂಸ್ಕೃತಿಯು ರಾಷ್ಟ್ರಗಳು ಸಹ

ಸೋಜಿಗದ ಕಿವಿನಾಡ ಧರ್ಮಬಧಿರರ ಕಂಡು
ಮೋಜೆಂದು ಗಣಿಸಿ ಯಾತ್ರಾರ್ಥಿಗಳ ಕಳುಹುತಿಪೆ ಅವರ ದುಡ್ಡನ್ನು ಕಿತ್ತು ।
ಭೋಜ್ಯಪೇಯಗಳಲ್ಲಿ ವಾರವನಿತೆಯರಲ್ಲಿ
ರಾಜರೇ ತಾವೆಂದು ಮುಳುಗಿರುವ ಮಂತ್ರಿಗಳ
ನಾಜೂಕು ಸವಿತೃಸುತ ಕರ್ಣನನು ನಾಚಿಸಿತು ದುರ್ದಾನ ಧರ್ಮದಿಂದ ॥೨೨॥

ಶ್ರಮದ ಮಾತು ಯಾವ ಕಿವಿಗು
ಕೇಳಿಸದೋ ಕೇಳಿಸದು
ಶಮದಮ ಸಂಪನ್ನರನ್ನು
ಹೊಗಳಿದರದ ನೊಪ್ಪದು ॥ ೨೩ ॥

ಬೇಕಾದಾಗ ತ್ರಿವಿಕ್ರಮಂ ಬೇಡವಾದರೆ ವಾಮನಂ ।
ಕಾಕಾಕ್ಷಿಗೋಲಕನ್ಯಾಯಮಂ ಲಂಬಕರ್ಣರ ರಾಜ್ಯದೊಳ್ ॥ ೨೪ ॥

ವರದಿಗಳ ನಂಬಿ ನಡೆವರ್
ಪರೋಕ್ಷಕಿಂತ ಪ್ರಮಾಣ ಮಾವುದುಮಿಲ್ಲಂ ।
ಹರಿಹರಪದದೆ ವಿಭಕ್ತರ್
ಓರಿಕಿರಿಯರ್ ವರ್ಗಜಾತಿವೈರೋನ್ಮತ್ತರ್ ॥ ೯ ॥

ಕರ್ಣಾಟದಧಟರನ್ಯರ್
ವರ್ಣಿಸಿದುದನೆಲ್ಲಮಂ ಕರಂ ಸ್ವೀಕರಿಸಲ್ ।
ನಿರ್ಣಯಿಸಿದ ರಣಧೀರರ್
ಕರ್ಣಮಾತರ್ ಕರ್ಣಿಕಾರ ಗಂಧರ್ ನರರೊಳ್ ॥ ೧೦ ॥

ಶಬ್ದಾಬ್ಧಿ ತಿಮಿಂಗಿಲಗಳ್
ಉಬ್ಬುರ್ ಸ್ವಜನರ್ಗೆ ಪರರಿಗಿನತನುಜಾತರ್ ।
ಶುದ್ಧಾಶುದ್ಧ ವಿವೇಕಕ-
ಬದ್ಧರ್ ಛವಿಗಳ್ ಸಮುಚ್ಚಿತಪ್ತರ್ ಪಾರ್ವರ್ ॥ ೧೧ ॥

ಅಂಥವರ ಮೆಟ್ಟಿ ಮುರಿಯುವ
ಪಂಥಂ ಮೊರಗಿವಿಯು ಗಣ್ಯಸಂಖ್ಯರ ನಿರತಂ ।
ಶಾಂತಂ ಪಾಪಮಶಾಂತಂ
ಕಾಂತಂ ಕಾಮೋಪಜೀವನಂ ಶ್ರೇಯಸ್ಕಂ ॥ ೧೨ ॥

ಎಂಬತಿರಥರಂ ನಂಬಿದ
ಕುಂಭೋದರರಂ ಪ್ರಗಲ್ಭರೆಂಬರ್ ದೊರೆಗಳ್ ।
ಲಂಬಾಯುತ ಮುಖನೇತ್ರರ್
ನಂಬಳದಾಳ್ಗಳ್ ಶ್ರುತಿಪ್ರಮಾಣರ ನಾಡೊಳ್ ॥ ೧೩ ॥

ಹೆಡಗೆಗಿವಿ, ಕೊಡೆಗಿವಿ, ಮೊರಂಗಳ
ಹಿಡಿದು ಹಚ್ಚಿರುವಂತೆ ತೋರುವ
ಒಡೆಯಗಿವಿ, ಒಕ್ಕಲಿನ ಗುದ್ದಲಿಗಿವಿ—ಅದೊಂದೆರಡೇ ? ।
ಹಿಡಿದ ಪಟ್ಟನು ಬಿಡದ ಹೆಗ್ಗಿವಿ

ನುಡಿದ ನನ್ನಿಯ ನುಂಗುವೊಳಗಿವಿ
ಬಿಡದೆ ಬೆನ್ನಟ್ಟುವ ಯಮೋಪಮ ಬೇಹುಗಾರಗಿವಿ ॥ ೧೪ ॥

ಬೆಪ್ಪುಗಿವಿ, ಜಪ್ಪೆಗಿವಿ, ಹುಪ್ಪುಗಿವಿ, ಹಾಳುಗಿವಿ
ತಿಪ್ಪುಗಿವಿ, ತಿನ್ನುಗಿವಿ, ಜರಲೆಗಿವಿ, ತರಲೆಗಿವಿ
ತಪ್ಪುಗಿವಿ, ತಾಳಗಿವಿ, ತನ್ನ ದನಿಯನ್ನಷ್ಟೆ
ಮೆಚ್ಚುವ್ರಚ್ಚಾತ್ಮಗಿವಿಯುಂ ।

ಚೆಪ್ಪು ಪೆಕ್ಕುವ ಚಾರರನಿಂಟುವಪ್ಪುಗಿವಿ
ಜಪ್ಪಿ ಜನಪದರಾಜ್ಯಗೈವ ಕಾಲದೊಳಿಂದು
ಅಪ್ಪಚ್ಚಿಯುಮ್ಮಣ್ಣಿ ಎರಡನೂ ಕಳಕೊಂಡ ತಿಪ್ಪೆಗಿವಿ
ಒಡಪರ್ಕಳ ॥ ೧೫ ॥

ಖಗದೇವರ ಮಿಗದೇವರ
ಹೊಗೆದೇವರ ಹೊಟ್ಟೆದೇವರಾರಾಧಕರಾ ।
ಹಗರಣಿಗರ್ ಹಳ್ಳಿಗಳೊಳ್
ಹಗಲಸ್ಸಿರುಳೆಂದು ಸಂಬುವಂತೆಸಗಿದಪರ್ ॥ ೧೬ ॥

ಅಬುಧರ ಕಿವಿಯುಗಲವನಳೆ-
ಪಬುಧಿಯನೀಸುವ ಹಿಮಾಲಯದ ಹೊರೆಹೊರುವ ।
ಕಬಳಿಪನಿದ್ದರೆ ಕಲ್ಗಳ
ನಭಃಸ್ಪೃಗಾಮೀತು ಕೀರ್ತಿಯಾತನದೀಯೊಳ್ ॥ ೧೭ ॥

ಆ ಕಿವಿಯ ಹೊಕ್ಕು ಮತ್ತೀ ಕಿವಿಯ ತೂತಿಂದ
ಬೇಕಾಗದಿದ್ದ ಮಾತುಗಳು ಹೊರಬಿದ್ದಾವು
ನಾಕು-ಜನರೆದುರು ಮುಂದಾಳೆಂದುಕೊಂಬ ವಿರಕರ್ಣಾಗ್ರಗಣ್ಯರಲ್ಲಿ
ಮೂಕ ಕೋಟಿಯ ಹಾಗೆ ಕರ್ಣಗತಭಾವನಾ
ಸಾಕಲ್ಯದಿಂ ಮೆರೆವ ನಾಯಕರ ನಡೆಯಿಂದ
ಶ್ಲೋಕಕ್ಕೆ ಜಾಯಿ ಮೂಕಂಬೊಲಾಯ್ತು ನ್ಯಾಯಗೀರ್ಣ ಸಾಕ್ಷರ
ಒಡವರ ॥ ೧೮ ॥

ಹಣೆಯ ಬರೆಹವಿದೆಂದು ಹಲವರು
ಎಣಿಸಿದರೆ ಕವಿಯರಸನಾಳ್ಕೆಯು
ತಣಿವರವನಧಿಕಾರಿಗಳು ಹಣವಿನಿಗಳಗ್ರಜರು ।
ಹಣವಗಳಿಸುವರವರ ಬಗೆಯಲಿ
ಫಣಿದವರ ಸುಲಿದನ್ಯರಹಹಾ
ಮಣಿಯುರಾರೀ ಹಿಂದುಗಳ ಹಿಂದುಳಿವ ಸಾಹಸಕೆ ॥ ೧೯ ॥

ಮುಟ್ಟು ಜಳಿಯನು ಜೆಳಿಯಿರೆಂದು ನಾಯಕರುಸಿರೆ
ಹುಟ್ಟು ಕವಿ ಲಕ್ಷಿಸದು, ಕಡಿವೆ ಮಕ್ಕಳ ಹಡೆಯು-
ರಟ್ಟು ಮಟ್ಟಿನ ಬಾಂಧವರೆ ಏನಲು ಕೇಳಿಸದು ಏಕೆಂದು ನೀವ್ ಬಲ್ಲಿರಾ?
ಬಿಟ್ಟರೂ ಸ್ವಾರ್ಥಿಗಳು ಅವರನನುಸರಿಸುತಿಹ
ಲುಟ್ಟರೂ ಸ್ವಾರ್ಥಿಗಳು ಲಂಚಕರ್ಣರ ದೇವ
ನೆಟ್ಟು ಕಡಿಮೆಯು ಮಾಡಲಿಲ್ಲ-ಸರಕಾರ ಮೇಣ್ ಪ್ರಜೆಗಳಾಚಾರದಲ್ಲಿ ॥೨೦॥

ಕವಿಯು ಅಗಲ ಉದ್ದ ದೇಹವಿತರಭಾಗಕಿಂತಲೂ
ಬುವಿಯ ಜನರೊಳಗ್ರಗಣ್ಯ: ಹೃದಯ ಗಾಢ, ನರಗಳೋ
ಹುರಿಗಳಷ್ಟು ಶಿಥಿಲ ಕತ್ತರಿಸಿದ, ಕರ್ಮಕಾಂಡದ
ಜರತತೆ ಉರಿ ತಣಿಸೀತೇ ಹೊಟ್ಟೆಯಗ್ನಿ ಕುಂಡದ ॥
ಐವತ್ತು ಕೋಟಿ ನರವಿಲ್ಲದಿಹ ನರರೊಟ್ಟು
ಐವಜಿನ ಕವಿಯು ಸರಕಾರ ರಚಿಸಿ
ಹಲವಿಧ ಸುಧಾರಣೆಯ ಹುಯ್ಯಲೆಬ್ಬಿಸಿದಾಗ
ಕುಲಗುಣವ ಬಿಟ್ಟೀತೆ ಕಿವುಡಾಗಿವಿಯು? ॥೨೦॥

ಆ ಅದೂ ಕೇಳದೀ ಇದೂ ಕೇಳದೋ ಉದೂ ಕೇಳದೀಗ
ಯಾವುದೂ ಕೇಳದಮುಲೇರಿದಂಥ ಕವಿಗಳಿಗೆ ಶಾಂತಿಯೋಗ ।
ಹಾವನೂ ಮರಿಸಿದ ಶಬ್ದವಿಮುಖಿರಧಿಕಾರ ದರ್ಪದಲ್ಲಿ
ಜೀವನ್ಮು ತಿಂದು ಬದುಕುವುದಕಂಜಿದರೆ ಕೊರಳಿಗೊಂದೆ ಬಳ್ಳಿ ॥
ಈ ಜಗದ ವಿಕಟ ಸಂಸ್ಕೃತಿಯ ರಾಷ್ಟ್ರಗಳು ಸದ

ಸೋಜಿಗದ ಕಿವಿನಾಡ ಧರ್ಮಬಧಿರರ ಕಂಡು
ಮೋಜೆಂದು ಗಣಿಸಿ ಯಾತ್ರಾರ್ಥಿಗಳ ಕಳುಹುತಿವೆ ಅವರ ದುಡ್ಡನ್ನು ಕಿತ್ತು ।
ಭೋಜ್ಯಪೇಯಗಳಲ್ಲಿ ವಾರವನಿತೆಯರಲ್ಲಿ
ರಾಜರೇ ತಾವೆಂದು ಮುಳುಗಿರುವ ಮಂತ್ರಿಗಳ
ನಾಜೂಕು ಸವಿತೃಸುತ ಕರ್ಣನನು ನಾಚಿಸಿತು ದುರ್ದಾನ ಧರ್ಮದಿಂದ ॥೨೨॥

ಶ್ರಮದ ಮಾತು ಯಾವ ಕಿವಿಗು
ಕೇಳಿಸದೋ ಕೇಳಿಸದು
ಶಮದಮ ಸಂಪನ್ನರನ್ನು
ಹೊಗಳಿವರದ ನೊಪ್ಪದು ॥ ೨೩ ॥

ಬೇಕಾದಾಗ ತ್ರಿವಿಕ್ರಮಂ ಬೇಡವಾದರೆ ವಾಮನಂ ।
ಕಾಕಾಕ್ಷಿಗೋಲಕನ್ಯಾಯಂ ಲಂಚಕರ್ಣರ ರಾಜ್ಯದೊಳ್ ॥ ೨೪ ॥

ನೇತ್ರಪ್ರಜ್ಞಾ ವಿಲಾಸವೆಂಬ ನಾಲ್ಕನೆಯ ಸರ್ಗ

The World of Visiles

ಪಂಡೆಗಣ್ಣಿನ ಕೆಂಡ ಕಾರುವ ನೋಟವೇ ನೋಟ
ದಂಡೆಯಿಲ್ಲದ ದಿಟ್ಟಿಯೊಂದೇ ನಾಯಕರ ಮಾಟ|
ಬಂಡೆವಲೆಗಿದೆ ಕುಂಡೆಗಣ್ ಅದರಾಟವೇ ಆಟ
ಕಂಡ ಕಂಡೆಡೆ ಕಣ್ ಕಿಸಿವುದಧಿಕಾರಧರ ಕೀಟ ! ॥ 1 ॥

ಕಣ್‌ಸನ್ನೆ ಮಾತು, ಜನರೊಳ್
ಪೆಣ್ ಸನ್ನೆಯೆ ನಡತೆ, ಕಣ್ಣ ಬೆದರಿಕೆಯಾಳ್ಕೆ ।
ಪಣ್ ಗಾಯಿ ಪೂದಳಿರ್‌ಸಹ
ಕಣ್ನೋಟಕೆ ಬೆದರಿ ಯುದುರಿ ಮುದುರುವ ಪಾಳ್ಕೆ ॥2 ॥

ತಾನು ಕಂಡಪ್ಪಕ್ಕೆ ಕೋಡು ಮೂರೇ ಎಂಬ
ಮಾನವರ ಮುಂದಾಳುತನವಲ್ಲಿ ಮಂಡೆಯಿಹ
ಮಾನಿಸರ್ ಮೂಕರೋ ಬೆಪ್ಪರೋ ಹೆಳವರೋ
ಆಗದಿದ್ದರೆ ಬದುಕರು।
ಸ್ವಾನಾಯುಸಂ ಧರ್ಮ, ಕಣ್ಣಿಂದಲೇ ಧನ–
ಧ್ಯಾನಮುಂ ಕೇಳಿ ಕಸಿದುಂಬ ದಂಭಾರೂಢ
ರಾನಂದ ರಾಜ್ಯದೊಳ್ ಕಿವಿ, ಮೂಗು, ನಾಲಗೆಗಳಿದ್ದರೂ
ಸತ್ತಂತೆಯೋ ॥ 3 ॥

ಕಂಡರಷ್ಟೇ ಪರರ ಮಾತಾಡಿಸುವ ಶಾತ್ಯ
ಕಂಡರೂ ಕಾಣಿಸದ ಹಾಗೆ ತಿರುಗುವ ನಾಟ್ಯ
ಕಂಡವರು ಬೆನ್ನುಹಾಕಿದಮೇಲೆ ಸತ್ತರೆಂದೇ ತಿಳಿವ ದಿವ್ಯಸ್ಮೃತಿ।
ಉಂಡಾಡಿರಾಜ್ಯದಲಿ ಮಂಡೆಗಿಲ್ಲ ಸ್ಥಾನ

ಕಂಡಕಂಡಂತೆ ಹರಿದಾಯ್ತು ನೇತ್ರಧ್ಯಾನ
ಛಂದನೋಟದ ಶಸ್ತ್ರ ಸಜ್ಜನರ ಸಂಹರಿಸ-
ಲಿರ್ದಪುದು ಸಿದ್ಧವಾಗಿ ॥ 4 ॥

ನೇತ್ರರೋಗ ರೋಗವಲ್ಲ
ಹಳದಿನೋಟ ಯೋಗ್ಯವಲ್ಲ !
ಪಾತ್ರದವರ ಜಾಣನೆಲ್ಲ
ತುಂಬಿಕೊಳದ ಕಣ್ಣು ಹೊಲ್ಲ ! ॥ 5 ॥

ಆಗದವರ ಮನೆಯ ಹೊಕ್ಕು ಚಿತ್ರಪಟವ ನೋಡಲು
ಆಗಲೇ ಅದೊಡೆದುಹೋಕು ಕಣ್ಣ ಶಾಪ ಸೋಕಲು।
ಮಾಗದಿರುವ ಮಿಳ್ಕೆಯೆಲ್ಲ ಪಟಪಟಾರನುರುಳುಗು
ಜಾಗದಲ್ಲಿ ನೋಡಿದೊಡನೆ ಬಿತ್ತಿದ ಬೆಳೆ ಮುರುಟುಗು ! ॥ 6 ॥

ಬಣ್ಣಕ್ಕೇ ಪ್ರಾಧಾನ್ಯಂ
ಉಣ್ಣುವ ರುಚಿಗಿಲ್ಲ ಭಕ್ಷ್ಯಭೋಜ್ಯಾದಿಗಳೊಳ್ ।
ಕಣ್ಣಂದಮಂಗಾಯನಮಂ
ತಣ್ಣಗೆ ಕೇಳ್ವರ್ ತ್ರಿಣೇತ್ರನಂ ನಾಚಿಸುವರ್ ! ॥ 7 ॥

ನಿತ್ಯ ಸಿನೆಮಾಗಳ ದರ್ಶನ ಕಣ್‌ಕಲಾವಿದಗೆ
ಅತ್ಯಮೋಘ ವಿಚಿತ್ರ ಚಿತ್ರನಿರ್ಭರ ವಸ್ತ್ರ
ಪಥ್ಯ ಬಣ್ಣದ ತಿಂಡಿ ತೀರ್ಥ ಮದ್ದುಗಳೆಲ್ಲ ದತ್ತೋಪದಾನ ರಮ್ಯ
ಮಿತ್ರಬಂದರೆ ಕಣ್ಣ ಹೊಡೆಯುವರ್ ಮನೆಯಲಿ ಸು-
ಮಿತ್ರೆ ಬಂದರೆ ಕಣ್ಣುಗಳ ಜೊತೆಗೆ ಹುಬ್ಬುಗಳ್
ಚಿತ್ರಿಸಿ ಕಟಕಿಸುವ ಭಾವಗಳ ಬಗೆಯೊಂದೆ?
ಶೇಷಶೀರ್ಷಾತಿರಿಕ್ತ ॥ 8 ॥

ಕುಣಿವುದು ಕಣ್ ಮಣಿವುದು ಕಣ್
ತಣಿಯುದು ಕಣ್ ಕಳ್ಳವೊಸ್ನ ಬಿಸ್ಕೀಟುಗಳಿಂ।
ದಿನಮುಂ ಕಂಡೂ ಪ್ರಜೆಗಳ
ದಣಿಸಿದರೂ ಹಿಂಡಿ ಹೀರಿ ಕರಭಾರಗಳಿಂ ! ॥ 9 ॥

ಕಣ್ ಕಣ್ ಬಿಡುವುದು ಧರ್ಮಂ
ಮಣ್ಣಾನಿಸರಾದ ಸತ್‌ಪ್ರಜಾಕೋಟಿಗಳ ।
ದುಣ್ಣರ ದುಣ್ಣೆಯರಾಳ್ಕೆಯು
ಕಣ್ಣೊಳಗಿರುವಗ್ನಿ ಬಾಡಬಂ ಬಲ್ಲಿರೆ ನೀಂ ? ॥ 10 ॥

ಮೋದುರಾ ಮಧುರಾ ದಾರಾಃ ಸುಧೀರಾ ನೇತ್ರಬರ್ಬರಾ: ।
ಪ್ರವರಾಃ ಸಚಿವ ಸ್ಥಾನೇ ದುರ್ಧರಾ ಭೀಮಭೈರವೈ: ॥ 11 ॥

ಮಾತಾಡುವಂಥಾ ಮಹನೀಯರನ್ನು
ಪಾತಾಳದಲ್ಲೊಯ್ದು ಅನಂತಕಾಲ।
ಬೇತಾಳದೊಲ್ ಕೊಂಬೆಗಳಿಂಗೆ ಕಟ್ಟಿ
ನೇತಾಡಿಪರ್ ನೇತ್ರ ನಿಮೇಷವಿದ್ಯರ್! ॥12 ॥

ಅನುಯಾಯಿಗಳಿಗೆ ಕಣ್ಣಿದ್ದರೂ ಇಲ್ಲ ಕೇಳ್
ಜನನಾಯಕರಿಗೆ ಕಣ್ಣಿರದಿದ್ದರೂ ಉಂಟು
ಅನುಮಾನವಿಲ್ಲ ಸರ್ವಾಧಿಕಾರಿಗಳ ಪ್ರಭುತ್ವದಲ್ಲಿದಕೆ ಜಗದೊಳ್।
ಪ್ರಣಯ ಯುದ್ಧಗಳಲ್ಲಿ ತಪ್ಪೆಂಬುದಿರದಂತೆ
ಘನನೇತ್ರರಾಡಳಿತದಲ್ಲಿ ತಪ್ಪುಗಳೆ ಸರಿ
ತನುವೆಲ್ಲ ಕಣ್ಣು ಕಣ್ಣೆಂದರದ್ಭುತ ತೂತು
ಹೆಣದಟ್ಟೆಗಿರುವಹಾಗೆ ॥13 ॥

ಈಕ್ಷಣದಿಂದೀ ಶಾಸನ
ಲೋಕಂ ಪುಟ್ಟಿದುದನರಿಯಿರೇ ನೀವೆಲ್ಲರ್ ।

ಈಕ್ಷಣ ಭಕ್ಷಣ ಸಾಧನ-
ವೀಕ್ಷಿತಿಯೊಳ್ ನೇತ್ರಸೂತ್ರಚಾಲಿತ ನರರ ॥ 14

ಕಣ್ಣರೆ ಕನ್ನಡಿಗರ್ ಗಡ
ತಿನ್ನುವ ತಿರುತಿರುಗಿ ಬರುವ ಮುಟ್ಟುವ ಕೇಸ್ಸು!
ಚಿನ್ನಾಟವಿತರಜನರಿಗೆ
ಕನ್ನಡಿಗರಿಗಿಲ್ಲಿ ಕಾಂಬುದೊಂದೇ ಕಜ್ಜಂ ! ॥ 15 ॥

ಡೆತ್‌ರೇ ಸಮಾನ ಸಚಿವೇಶ್ವರರುಗ್ರ ನೋಟಂ
ನೃತ್ಯತ್ ಕರಾಳ ಕಮನೀಯ ನಿಶಾತತಾರಂ।
ದೃಕ್ ಪಾವಕಪ್ರಜನನಂ ಪ್ರಲಯಪ್ರಯೋಗಂ
ದಿಕ್ಕೆಟ್ಟುಹೋದ ಬಡವಂಗೆ ದಿವಾಳಿಭೋಗಂ ॥ 16 ॥

ಕಿಟಕಿಗಂಗಳ ಮೊಟಕು ಮೂಗಿನ
ದಿಟಕೆ ಬಾಹಿರವಾದ ಜಿಹ್ವೆಯು ।
ಕುಟಿಲನಾಸಕೆ ವಾಸನೆಯು ಗೊತ್ತಾಗದಿರುವಾಗ।
ಹಟಕೆ ಬಾಗುವ ಕುರುಡ ಬಡವನು
ಪಟಕೆ ಹೆದರುವ ನೇತ್ರಗಾತ್ರದ
ತುಟಿಗಳನು ಬೆಸೆದವರ ಸೇವೆಗೆ ಸವೆವ ಜೀವವನು ॥ 17 ॥

ದೃಷ್ಟಿಯುದ್ಧದಿಂದ ಗುಡ್ಡ
ದಷ್ಟು ಬಾಂಬುಗಳನು ಸುಡುವ
ದಿಟ್ಟರಕ್ಷಿಕಾಯರಿಲ್ಲಿ ಕಣ್ಣ ಮಿಟುಕಿಸಿ ।
ಇಷ್ಟವನ್ನು ಪಡೆವ ಧೃಷ್ಟ
ಧೃಷ್ಟೆಯರ್ಕಳಧಿಪತಿಗಳು
ಶಿಷ್ಟರನ್ನು ಕಾಲಕಸಕೆ ಸರಿಯು ಮಾಳ್ಪರು ॥ 18 ॥

ಅದು ಕಣ್ಣಿದು ಕಣ್ಣುದಂ ಕಣ್
ಚಮರರ ಮೈಯೆಲ್ಲ ಕಣ್ತುಂಬಿದ ಪೆಡಗೆ।
ಒದರರದಾರೂ ನೋಟವೆ
ಒದಗಿಸುಗೆಲ್ಲವನವರ್ಗೆ ನಿಮಿಷದೊಳಮುಮಾ ! ॥ ೧೯ ॥

ಮಿಂಚುದೀಪ ಬೇಡವಿಲ್ಲಿ
ಮಿಂಚುಗಣ್ಣ ಬೆಳಕೆ ಸಾಕು
ಚಂಚಲಿಸಲು ಬೆಳಕ ಬೀರಿ ಮನೆಮನೆಗಳಲಿ।
ವಂಚನೆಯಲಿ ಚಿಲ್ಲರೆಗಳ
ಸಂಚಯಿಸಲು ಬಲ್ಲ ಇವರ
ಪಂಚಶೀಲ ಪಂಚಭೂತವಶ್ಯವಾಗಿದೆ ! ॥ ೨೦ ॥

ಜ್ಞಾನವಿಲ್ಲದೆ ಗೆಲವಿನಲ್ಲಿ ಬಾಳುವ ಚಟ್ಟಿ
ಮೀನಿನಂತಹ ಕಣ್ಣುಮಿಟುಕದೊಯ್ಯಾರವನು
ಮೀನಕೇತನ ರಾಜ್ಯಪಾತ್ರಮೊಪ್ಪೀತು ಸಾಕಾಮೆಚ್ಚುಗೆಯೆ ಜನರಿಗೆ।
ಆನೆಯಾರತಿ ಬೇರೆ ಆ ರಸಿಕಮತಿ ಬೇರೆ
ಪಾನೀಯುಗಳ ಕಂಗಳಿಂದ ಕುಡಿದಮಲೇರೆ
ಮಾನಾಪಮಾನ ಭೇದವ ಮೀರಿದದ್ವೈತ
ಕರತಲಾಮಲಕವಕ್ಕು ॥ ೨೧ ॥

ವಿಪರೀತ ಗಜಕಡ್ಡಿಯಿಂದಳೆವ ಕಣ್ಣಳತೆ
ಆಕಾಶಕಿಂತಲೂ ಅಗಲ ಅಗಲ।
ಅವಕಾಶಕಿಂತಲೂ ಆಳ ಆಳ ಕರಾಳ
ಅರ್ಧನಗ್ನಸ್ತ್ರೀಯ ಸಂಘದ ಬಲ ! ॥ ೨೨ ॥

ಬಂಧವಿವರ್ಗೆ ವಿಮುಕ್ತಿ
ಛಂದಂ ಸ್ವಚ್ಛಂದ; ಮಂದರೇ ತ್ರೈಣೇತ್ರರ್ ।

ಚೆಂದವೆ ನನ್ನಿ ದಿಗಂಬರ
ಸುಂದರರಿಗೆ ವೇಷಭೂಷಣಾತ್ಮರ್ಗೆಂದುಂ ‖ ೨೩ ‖

ಇಂತಿರ್ಪ ಮಹಾರಾಷ್ಟ್ರದ ನೇತ್ರಪ್ರಭಾವಲಯದೊಳ್।

ಕಂಡುದಷ್ಟೇ ಸತ್ಯ ಕೇಳಿದೆಲ್ಲಾ ಸುಳ್ಳು
ಕಂಡಂತೆ ಭಾವಿಸಿದ್ದೂ ಸತ್ಯವೆಂದು
ಮುಂಡೆಯುಳ್ಳಿಹ ಮಿದುಳ ಬಳಸದಿಹ ಭೂಮಿಜರ
ತಂಡದಾಳಿಕೆ ಸಮಜವಾದವಿಂದೊಂದು ‖ ೨೪ ‖

ಆಲೋಚನಾಲೋಚನಾಭಾವ ವಿಖ್ಯಾತಿ:
ಚಾಲಿಸತೆ ಬಹುಮಾನ್ಯ, ಹಿಪ್ಪಿಯೋಗ ಭ್ರಾಂತ-
ಘಾಲೋತ್ತರಾಕ್ಷರಾದರ್ ಕನ್ನಡಕ ಧರರ್ ವಿಜ್ಞಾನಭಗ್ನ ನೇತ್ರರ್।
ತಾಳತಂತಿಗಳಿರದ ಕಾಲಯಾಪನೆಯೆ ಕಲೆ;
ಮೇಳಕ್ಕೆ ಮೋಷಗಳ ತೋಳವೇ ನೇತಾರ
ಕಾಳಲ್ಪಸಂಖ್ಯರಿಗೆ ಜೋಳ್ಪ ಬಹುಜನರಿಗೆನೆ
ನಾಮಕರ್ಪತೆಯಿಲ್ಲದ ‖ ೨೫ ‖

ಒಕ್ಕಣ್ಣರಿಕ್ಕಣ್ಣರವರೊಡನೆ ಮುಕ್ಕಣ್ಣ-
ರಕ್ಕಪಕ್ಕದಲಿ ಪಲಗಣ್ಣರಲ್ಲದೆ ಕಣ್ಣ
ಸೊಕ್ಕಿನಿಂದೇ ಕುರುಡರಾದವರ್ ಲಂಚಕ್ಕೆ
ಮಾತ್ರ ಕಣ್ದೆರೆವ ವಿಬುಧರ್ ।
ಪಕ್ಕಲಾರಿಸ ಪಚ್ಚಿಪಳ್ಳಿಗಳ ಬಡ ಜನಕೆ
ಮಕ್ಕಳಾಗದ ಮದ್ದ ಚುಚ್ಚಿ ಮೆರೆದಾಡುವರ್
ರೊಕ್ಕವೇ ರೂಪವೆಂಬರ್ ಮಿತಿಯದಕ್ಕಿಲ್ಲ
ವಿವಿಧಸುಖಸಾಧನಗಳ ‖ ೨೬ ‖

V

ಮುಖಪ್ರಜ್ಞಾವಿಲಾಸವೆಂಬ ಐದನೆಯ ಸರ್ಗ

The World of Oriles

'ಬ್ಯಾ' ಎಂದವನೇ ಬೊಮ್ಮಂ
ಬಾಯ್ದೆರೆದಾಕಾಶದಗಲಮಂ ಕಿರಿದೆನಿಸಲ್।
ಬಾಯ್ಬಡಕರನ್ನು ಸೃಜಿಸಲ್
ಬಾಯ್ಬಲಮಂ ಬೈಬಲೆಂದು ಸಾರಲ್ ನಿಧಿಪರ್ ‖ ೧ ‖

ಬಕಬಾಯ್ ವೃಕಬಾಯ್ ಮೊಸಳೆಯ
ಕ್ರಕಚೋಪಮದಂತಯುಕ್ತ ಬಾಯ್ ಹೆಗ್ಗವಿಬಾಯ್।
ಮುಖವಿಡಿ ಬಾಯ್ ಭಾರತದಲಿ
ಸುಖಲಕ್ಷ್ಮೀಪುತ್ರರಾದ ನೇತಾರರಿಗೆ ‖ ೨ ‖

ಮಾತಿಂದ ಕಲ್ಯಾಣ ರಾಜ್ಯಮಂ ಕಟ್ಟುವರ್
ಮಾತಿಂದ ಸರ್ವಸಮತಾರಾಜ್ಯಮಂ ಕಟ್ಟಿ
ಮಾತಿಂದಲೇ ಪ್ರಜೆಗಳಂ ಪ್ರಭುಗಳೆಂದುಸಿರಿ
ತಮ್ಮ ಬೇಳೆಯ ಬೇಯಿಸಿ।
ಮಾತುಪೊರಡುವ ತೂತಿನೊಳಗಿಳಿಸಿ ತಿರುಗುವರ್
ಮಾತುಕೊಟ್ಟದ್ದನ್ನು ಮುರಿವ ಮರ್ಯಾದೆಯಂ
ಜೇತಿನಿಂ ಪಾಲಿಸುವ ಬಾಯೂರ ಭಾರಿ ಮು-
ಸ್ತಾದರಸಹಾಯಶೂರರ್ ‖ ೩ ‖

ಮಾತಿನಿಂ ಬೆಳೆಯ ಬೆಳೆವರ್ ಮನೆಯ ಕಟ್ಟುವರ್
ಮಾತಿನಿಂ ಕೊಳಚೆಯಂ ತೆಗೆವರ್ ಕರಂಗಳಂ
ಮಾತಿನಿಂದಿಳಿಸಿ ಪರಗಳನೆಲ್ಲ ದುರ್ಜನರ ಮಾತಿನಿಂದೇ ಶಿಕ್ಷಿಸಿ।
ಮಾತಾಯನದ ಹಾಗೆ ದೇಹಕ್ಕೆ ಬಾಯ್ ಎಂದಂ

ಸೋತರೂ ಗೆದ್ದ ಹಾಗೇ ಎಂದು ಬಗೆವ ದುರ್-
ಯೂಥಪರ್ ರಾಜಕಾರಣ ಪಟುಗಳೀ ಪ್ರಜಾರಾಜ್ಯದೊಳ್।
ಮೆರೆಯುತಿರ್ಪರ್ ॥ ೪ ॥

ಗಡಿಯಂ ಕಾಯಲ್ ಬಾಯಿದೆ
ಗುಡಿಸಲುಗಳ ಕಟ್ಟಲಿರ್ಕು ಬಾಯ್ ಮುಖಿಪುರದೊಳ್ ।
ಬಡವರಿಗನ್ನವನಿಕ್ಕಲ್
ತಡವಾಗದು ಬಾಯಿ ಬಡಿಸುಗೆಲ್ಲವನನಿಶಂ ॥ ೫ ॥

ಹಸಿರಿನ ಕ್ರಾಂತಿ, ವನವೃದ್ಧಿ: ಧಾನ್ಯ ಸಮೃದ್ಧಿ
ಹೆಸರಿಲ್ಲದವರಿಗೇ ಹೆಸರ ಪಟ್ಟವ ಕಟ್ಟಿ
ಜಸವ ಕೊಡಿಸುವ ಕಾಮುಕಗಳ ಕ್ರಿಯಿಲ್ಲವೆಂದು
ಬಾಯಿಂದಲೇ ಮಾಡಿಸಿ।
ಮುಸಗಿ ಮಾಡಿಂದ ಸಾಹಿತ್ಯ, ಸಂಸ್ಕೃತಿ ವಿದ್ಯೆ,
ಹೊಸ ಹೊಸ ಮಹಾಶೋಧ, ಶಾಸ್ತ್ರಂಗಳಂ ಬಾಯ
ಮುಸಿ ಮಾಡಿಸಿಂದ ರಾಷ್ಟ್ರಕ್ಕೊದಗಿಸಿದ ಮಹಾವೀರರೀ
ಬಾಯಾಳ್ಗಳು ॥ ೬ ॥
ಬಾಯ್ ಬಡಿಗೆಗಳಂ ಬೀಳ್ವರ್
ಬಾಯ್ತುರಿಯಿಂ ತೀರ್ಚಲೆದ್ದು ಜಾಡಿಯುಸುಸಿ ।
ಬಾಯ್ತುಂಬ ಕುಡಿದು ತೇಗುವ
ರಾಯ್ತೊಂದೆದೆದ್ದೋಡುವರ್ ಸಭಾಗೃಹದಿಂದಂ।
ಬಾಯ್ ಪ್ರತಿನಿಧಿಗಳ ಬಾಯಾರ್ಪಿಗೆ
ನಾಯ್ ಸಹ ಸರಿದೋಡದಿರ್ದೊಡಂ ಪಥದಿಂದಂ।
ಆಯ್ತಾಯ್ತೆಲ್ಲ ಸುಧಾರಣೆ
ಹೋಯ್ತೆಲ್ಲಾ ಕಷ್ಟವನ್ನ ಬೇಕು ಪ್ರಜೆಗಳ್ ॥ ೭ ॥

ಬಾಯಲ್ಲೇ ಬ್ರಹ್ಮಾಂಡವ-
ನಾಯುತಿಯಿಂ ತೋರ್ದನಂದು ತಾಯ್ಗೆ ಮುರಾರಿ।

ಆ ಯುಕ್ತಿಯಿಂದೆ ವದನ-
ಶ್ರೀಯುತರಿಂದೇಳ್ಗೆ ವಡೆವರೆನಲಜ್ಜರಿಯೇಂ ॥ ೮ ॥

ಅದೂ ಸಕ್ಸೆಸ್ಸಿದೂ ಸಕ್ಸೆಸ್ಸದೂ ಸಕ್ಸೆಸ್ ಮುಖಾತ್ಮಕರ್ ।
ಒದರಲ್ ವೇದಿಯನ್ನೇರಿ, ಪತ್ರಿಕಾಗೋಷ್ಠಿಯೊಳ್ ಸದಾ ॥
ಉಂಡದೆಂದುಣ್ಣದವರಂ ಬಣ್ಣಿಸಲ್ ರಾಜವಾಗ್ಬಲರ್
ಸತ್ತರೂ ಬದುಕಿದವರೇಂ ಆದಾರವರ ಫೈಲಿನೊಳ್ ॥ ೯ ॥

ಅಸ್ಪೃಶ್ಯಂಪದಾಸ್ಪದಿಃ ಭಾರತಾಖ್ಯ ದೇಶ
ದಾಸ್ಯರಿಂಗೆ ದಾಸ್ಯದೀಕ್ಷೆ ಕೊಡುವುದೇ ವಿಶೇಷ।
ಅಸ್ಪೃಶಕ್ತಿ ಮಹಾಮಾಯೆ, ವೇದಗೀದವೆಲ್ಲ
ದಾಸ್ಯಮುಖಜವಾದ್ದರಿಂದ ಶ್ರೇಷ್ಠ ಬಾಯ ಮಲ್ಲ ॥ ೧೦ ॥

ಮಾಳ್ಪುದು ಬಾಯ್ ಚೇಳ್ಪುದು ಬಾಯ್
ಕಾಳ್ಬುರವಂ ಸೃಜಿಸಿ ಕಣ್ಣೀರ್ ಸುಳಿಯಿಸುವ।
ನಾಳ್ಪಗರಣವಂ ನಡೆಯಿಸಿ
ಬಾಯ್ ಚಪ್ಪರಿಸುತ್ತಿರ್ಪುದೇ ನೇತೃಗುಣಂ ॥ ೧೧ ॥

ಮುಖ ಮಹಾಲಿಂಗವನು ತೋರ್ಪುದು
ಮುಖ ನಿರುದ್ಯೋಗವನು ಕಳೆವುದು
ಮುಖ ಮಹೌಷಧಿಗಳನು ಬಡವರಿಗಾಗಿ ಹಂಚುವುದು।
ಮುಖ ಮಹಾಖಿಲ ಸರ್ವಯೋನಿ
ಪ್ರಖರ ಮಾರ್ತಾಂಡ ಪ್ರತಾಪವ-
ನಖಿಲ ನಾಯಕವರ್ಗಕೀವುದು ಮುಖ ಮಹಾದೇವ ॥ ೧೨ ॥

ಹುಡಿನುಡಿಗಳೆ ವಿಮರ್ಶೆ, ಯೋಜನೆ
ಹುಡಿನುಡಿಗಳೆ ವಿಚಾರ ವಿಸ್ತರ
ಹುಡಿನುಡಿಗಳಾಚಾರ, ಧರ್ಮಧ್ವಜ ಮಹಾಮೇರು।

ನುಡಿಯೆ ನಡೆ, ನಡೆಗಲ್ಲಮನ್ನಣೆ
ನುಡಿವ ಬಾಯ್ ಮತಗಳನು ನುಂಗಲ್
ಪಡೆವು ಬಂದಿಪೆಯರ್ಹತೆಯು ಬಾಯ್ಸ್ಗೆಸೆಯುರೊ ಮತವ ॥ ೧೩ ॥

ತರುಣ ತರುಣಿಯರೆಂಬ ಭೇದಪದಗಳಿಗಿಲ್ಲ
ಜಾತಿಭೇದ ಪದಪ್ರಯೋಗಕಿಲ್ಲ।
ಪದದಾನಯಜ್ಞ; ಅರ್ಥಕ್ಕೆ ಭಸ್ಮೀಭವನ
ಪದವಿ; ತೊದಲಿಗಕಾದಮಿ ಪ್ರದಾನ ॥ ೧೪ ॥

ಹರಿಜನೋದಯ ಗಿರಿಜನೋದಯ
ಕುರಿಜನೋದಯ ಮರಿಜನೋದಯ
ದರಿಜನೋದಯ ಬಾಯೊಳೇ ಸಿದ್ಧಿಸುವುದಿದು ಮಂತ್ರ।
ನರರಿಗೆಲ್ಲ ಪರಿಸ್ಥಿತಿಯೊಳೂ
ದೊರಕುವುದು ಕಣ್ಗೆಟುಕದಿರುವೀ
ಬರಿಯ ಬಾಯುಪಚಾರ ಮುಖ ರಾಜ್ಯಾಧಿಪತಿಯಿಂದ ॥ ೧೫ ॥

ರಾಷ್ಟ್ರಮೈತ್ರ್ಯುದ್ಧಾರ, ತೆರಿಗೆಗಳ ತೆಗೆಸೊಗೆದು
ಭ್ರಾತರೆಲ್ಲಾ ಬಡವರೆಮಗೆನ್ನುವುದ್ಗಾರ,
ನಾತನೆಲದಲಿ ವಾಸಿಸುವ ಜನಗಳಿಗೆ ಮನೆಗಳನ್ನು ಕೂಡಲಿಕಟ್ಟಿಸಿ।
ಭೀತಿಗಳೆವ ಸಮ್ಮಸಾಯ್ದವರಿಗೆಂದು ಸಂ
ಪ್ರೀತಿರಸಧಾರೆಳ ಬಾಯಿಂದ ನೀಡಿ ಮೇಣ್
ಕೈತೋರಿಸದ ಕಮಲಮುಖರ ವನ್ಯಾಚಾರ ಮುಖರಾಜ್ಯಭಾರ
ಶೌರ್ಯ ॥ ೧೬ ॥

ಪದಕೋಶಂಗಳ ಸಂಪತ್
ಉದಾರನೇತಾರರಲ್ಲಿ ಕೊಡಲಿದೆ ಮುಖದಿಂ।
ಒದರುಪ್ಪುದರಿಂದ ಸರಸತಿ
ಜದದೋಣಿಡಿದ ಹಾಗೆ ತೋರ್ಕುಣ ನಾಚಿಕೆಯಿಂದಮ ॥ ೧೭ ॥

ತಂತೆಲ್ಲ ದಸಾತಿಸೊಳ ವಿಃ
ಬೇತಾಳರ ರಾಜ್ಯದಲ್ಲಿ ಸುಂಗುವರೆಲ್ಲರ್।
ಕೂತಲ್ಲೇ ಸಾವಿರಗಳ
ನಾತಂಕವುಮಿಲ್ಲ ಗದ್ದುಗೆಗಳನ್ನೇರಲ್ ॥ ೧೮ ॥

ಪೃಥಗ್ವ್ಯವಸ್ಥಾನಂ
ಸ್ವಾರ್ಥಕ್ಕೆತಿಯಿಲ್ಲ ರಾಜಪ್ರತಿಪರ ಹಸ್ತಂ।
ಸ್ವಸ್ತಿಮುಖದಿಂದ ಮರೆಯಿಸಿ
ಜಸ್ತ್ರರಪ್ರೊಲ್ ಬಳಕಗಾರರಂ ಪಿಡಿದೆಳೆವರ್ ॥ ೧೯ ॥

ಜಯ್ಬಯರ್ ಕೊಬ್ಬಿ ಪಂಚಲ್
ದುರ್ಭೇದ್ಯಾಲೋಚನರ್ಗೆ ಮುಖಮುಖರಿಂಗೆ।
ಅಯುಕ್ತ ಪದಚೀಲರ್ಗೆ ಪ-
ದಾಬ್ಬಂಗಳ ಸೊಂದೆಸವನೆ ಜೀಕಿವರ್ಗಳೆಯೊಳ್ ॥ ೨೦ ॥

ಗಗನಾಂಬುಜಸುರಭಿ ಬೇಕೆ?
ಕೂರ್ಮಸ್ತ್ರೀಸ್ತನ್ಯ ಬೇಕೆ?
ಕಬಂಧ ಸಂಗೀತ ಬೇಕೆ?
ಕಾಕದಂತ ಕಿರಣ ಬೇಕೆ?
ಭದ್ರಶ್ರೀ ಬಿರುದು ಬೇಕೆ?
ಕದ್ದು ತಂದ ಡಿಗ್ರಿ ಬೇಕೆ?
ಮರೀಚಿಕೆಯ ನೀರು ಬೇಕೆ?
ಶಶವಿಷಾಣಗಳು ಬೇಕೇ? ॥ ೨೧ ॥

ಕಾಲುಬಲ್ಲದ ಕೊಟ್ಟಿ ಹೂರಣವನು ತೆಗೆದ ಹೋಳಿಗೆ
ನೆಲಗಟ್ಟಿಗೆ ಒರಲೆ ಹಿಡಿದ ಹಳೆಯ ಮನೆಯ ಮಾಳಿಗೆ।
ಬರಡೆಮ್ಮೆಯಿಂ ಹಾಲ ತುಂಬಿಸಿಟ್ಟ ದೊಡ್ಡ ಕೌಳಿಗೆ

ಹಲ್ಲು ಮುರಿದು ಹೋದ ಬೊಚ್ಚು ಬಾಯಿ ಹೆಚ್ಚು ವೀಳಿಗೆ ॥ ೨೨ ॥
ಬೇಕೇ?
ಬೇಕೇ?
ಬೇಕೇ?

ನೂರುಯೋಜನದಗಲಬಾಯಿಯು
ಹಾರು ಮಾತಿನ ಹಗುರ ಮಿದುಳಿನ
ಘಾರಿಯೋಜನೆಯಿಂದ ನಡಸಿದ ಪರ್ವತಪ್ರಸವ।
ತೋರುವೀ ಬಾಯ್ನಾಡ ಬೊಂಡದ
ನೀರು ಪಾಚಿ; ದಿವೌಕಸರಿಗೂ
ಸೇರುವುದು ಮಾತಾಳಿ ಹೇಳಿವರೆಂಬುದೇ ಸತ್ಯ! ॥೨೩॥

ಸದ್ದು ಗದ್ದಲ ಗೊಂದಲಂಗಳ
ಮೊದ್ದು ಸುಖಪಡಬೇಕು ನಾಡಿನ
ಮುದ್ದು ಜನಗಳು ಮಾಲುಗಳು ಗೋಲಗಳು ಮರುಳಿರದ।
ಕದ್ದು ಕೊಂದು ತೊದಲ್ದು ವಿಜ್ಞಾ-
ನೋದ್ಧರಣದಿಂದಲೆ ಸಮರ್ಥಿಸಿ
ಗೆದ್ದ ಮುಖವೀರಾಗ್ರಣಿಗಳ ಹೊಗಳಲಳವಲ್ಲ? ॥೨೪॥

ಮಾಡದಿಹ ಕಜ್ಜಕ್ಕೆ ಮಾತೆಂಬುದೇ ಪ್ರತಿಮೆ
ಮಾಡದುದ ಮುಚ್ಚಲೂ ಮುಖವಾಡವು।
ಆಡಲಾಟಿಗೆ ಮಾತು ಸೋಮಾರಿಗಳಿಗೆ ಬಾ
ಯಾಡಿಸಲು ಬರುವ ಕಜ್ಜಾ ಜೋಡವು! ॥ ೨೫ ॥

ಮಾತಿನ ರಾಜ್ಯವೆ ಮಾತೆಯ ರಾಜ್ಯ
ನಮೋ ಅದಕ್ಕಿನ್ನು।
ಮಾತು ಬಿಟ್ಟವನು ಮಾತೆ ಬಿಟ್ಟವನು
ಮಾತು ಕೊಡದೆ ಬನ್ನಿ ॥ ೨೬ ॥

VI

ಕುಂತಲ ಪ್ರಜ್ಞಾವಿಲಾಸವೆಂಬ ಆರನೆಯ ಸರ್ಗ

The World of Hirsutes

ಬೀಯುಂ ಶ್ರೀಕರ ರಾಜ್ಯದ
ಸಾಯುಂ ವ್ಯಾಪಾರಿ ರಾಜಧಾನಿಗೆ ಪೋಗಲ್,
ಆಯುವ್ಯಯ ಮತಿವಂತರ
ಜಾಯಾರಾಧನೆಯ ನೀಕ್ಷಿಸಲ್ ಸೊಗಸಕ್ಕು ॥ ೧ ॥

ಸ್ವರ್ಣಲತೋದ್ಯಾನರ್ಬಹು
ವರ್ಣರ್ ಪಮೊಣಕ್ಕರೆಲ್ಲ ಪಕ್ಕುಗಳೊಪೆಯುರ್।
ನಿರ್ಣಯಕಕೇಶಬಲರ್
ಮಾರ್ಣಯುಮನ್ನಪ್ಪಿನಡೆವ ಪಿಪ್ಪಿಗಳ ನೆಲಂ ॥ ೨ ॥

ಕತ್ತುಪ್ರಜ್ಞೆಯ ಕಿಂಗುರಿ
ಮೊತ್ತಂ ಜನರಾಶಿಯಂಥಭಕ್ತಿಯ ತೀರಂ।
ಕತ್ತಿನ ಕುಂತಲದಿಂದೆಳೆ-
ಯುತ್ತಿರ್ಪುದ ನೋಡಿದ್ದೈ ಜುನಾವಣೆಕಣದೊಳ್ ॥ ೩ ॥

ಪ್ರಾಥಮಿಕ ಮಾಂತ್ರಾವ ಶಿಕ್ಷಕರ್ ಕಾರ್ಯನಿ-
ಯಮಾತ್ರವಂತಿಪ ಕಟಿಪಿಕಾರರ್ ಪ್ರಶಾಸನದ
ಘೌತಮಟ್ಟದ ನೌಕರರ್ ಜಿಕ್ಕಭೂಧರರರ್ ರಿಕ್ಷಾಜಟಾಧಾರಿಗಳ್।
ಮಾತಾಳಗತ ಜೀವನಾವಶ್ಯಕಾರ್ಥರ್ ಪ್ರ-
ನೀತರಾಪರ್ ಜೀಜಭಂಗಕ್ರಮಗಳಿಂದ
ಮಾತಾಡಮೋಸುವರ್ ಕೂದಲಿಂ ಸೀಳಿ ತರ್ಕಿಸುವ ಬಗೆಯಿಂದ ಹಣವ॥ ೪ ॥

ಕಾಮ ನಪುಂಸಕ ಕೋಪ ನಪುಂಸಕ
ಲೋಭ ನಪುಂಸಕ ಮಿಡುಳಿದೆಗಳ್ಸಹ
ಮೋಜಾರಾಜ್ಯದ ಕಾಳ್ಗದಲ ಮಂತ್ರೀಶ್ವರರಾಕ್ಕಿಯುಲಿ।
ಧೂಮೋಚ್ಛ್ವಾಸರ ಮುಂಗುರುಳಲಿಗಳ
ನೇಮವೆ ನೇಮಂ ಹಚ್ಚಿಗಳಾಗಿಹ
ಪಾಮರರಿಗೆ ಡಿಗ್ರೀಧರರಿಗೆ ವಿದ್ಯಾರ್ಥಿಗಳಿಗೆ ನಾಡ ॥ ೫ ॥

ಇಂಥವರಂ ತಿಂದನುದಿನ ಬದುಕುವ
ಪಂಥವ ಹಿಡಿದ ಪರಾಕ್ರಮ ಸೂಕರ
ತಿಂತಿಣಿ ತೋರುವಕೂದಲಿ ಕೂದಲ್ ತಿರುಪತಿಯೊಡೆಯನಿಗೆ।
ಬೆಂತರಗಳು ನಟರಾಜರು ಸಿನೆಮದ
ಕಂತುಗಳಂ ನಾಚಿಸುವ ಧುರೀಣರು
ಮಂತಣವಿಲ್ಲದೆ ಸಭೆಯಲಿ ವೇದಿಕೆಯೇರುವ ಕಪಟಿಗಳು॥೬॥

Though the mills of God grind heavily
yet they grind extremely slowly!

ಸುವಿಚಾರವಂತರೆಂಬುವರ ತಲೆ ಹಳಿಗತ್ತ
ಅವಿಚಾರ ಫಲವಂತರುದ್ಯಾನಲತೆ ಚಿತ್ತ
ಕವಿಗಮಕಿ ಪಂಡಿತ ವಿಮರ್ಶಕರ್ ಜೂಜಿಗರ್
ಪೆಟ್ಟುಬಿದ್ದರು ತಿಳಿಯದ।
ಅವಿಗಳಾದರ್ ಪಕ್ಷಿಗಳ ಹಿಡಿದು ತಿರುಗುತಿಹ
ದಿವಿಜ ರಾಜ್ಯೋತ್ಸವದಿ ಚಂದ್ರಹಾಸರ ಜೈದು
ತ್ರಿವಿಧ ಕಿಗಳರ ರಾಜ್ಯದೊಳ್ ನವ್ಯ ಸಂಕೀರ್ಣ ಕಚಮುಖರ
ಕಿಮ್ಮೀರರ ॥೭॥

ಪಗ್ಗವ ಹೊಸೆಯುವ ಕಸಬೇ ಕಸಬು

ಕಾಲಿಪ ಕಸಿಯುವ ತುಂಬಿಕೆಯು ಇಸಬು
ಶತಪಥ ಹಾಕುವ ಸೈನಿಕರುಬ್ಬಟೆ
ಜಟಿಲರ ವಂಚಕ ಕಲಿ ಕೇಳ್ ಪ್ರಕ್ಕಟೆ
ಸಿಕ್ಕದು ನೋಡಲ್ ತೆರಬೇಕೆಲ್ಲವ
ಕಟ್ಟಿದ ಜುಟ್ಟಿದ ಕಾಯಕದವರಿಗೆ! ||೮||

ಸ್ವರತಿಕ್ರೀಡೆಯು ಸಭ್ಯಾಭ್ಯಾಸ;
ಬಿಚ್ಚಿಕೆ ಮೂರ್ಖಳ ಕಂಕುಳ ದಾಸ
ಪಾತಧರ ಕಂಬಳಿ ಹೊದೆದ ನಿವಾಸ;
ಪತಿಯನು ಗತಿಗೆಡಿಸುವ ಹವ್ಯಾಸ:
ಅತಿ ಪಾನವ ತಾನೆಂಬೀ ಗುಂಪು
ಶತಗಸ್ತಂಗಳ ಹೊತ್ತಿಹ ಪೆಂಪು
ಪರಹುತ್ತಿಪ ದುರ್ನಯಂಗಳ ಕಂಪು
ಪೈತ್ರರ ಹೃದಯಕ್ಕಾಯಿತು ತಂಪು! ||೯||

ಪಿತ್ತಕೇಶದ ಕಂಗಳಿಗೆ ಬರಿ
ಕತ್ತ ಮಿಡುಳಿನ ಕಿವಿಗಳಿಗೆ ಮೈ-
ವೆತ್ತ ಮಾಂದ್ಯದ ರೋಮಹಸ್ತಾವಳಿಗೆ ಸತ್ಕಾರ।
ಕತ್ತೆವಾನಿಸರೆಂದು ಸಭ್ಯರ
ನಿತ್ಯ ದುಡಿಸುವ ರಾಜ್ಯದಲಿ ಬರಿ
ಬೆತ್ತಗಾಯದೆ ಬತ್ತೆ ಶಾಸನ ಧೂರ್ತಘೂತ್ಕಾರ ||೧೦||

ಪುಲಿಕೇಶಿಗಳ್ ಕೆಲರ್ ನರಿಕೇಶಿಗಳ್ ಕೆಲರ್
ಕರಡಿಕೇಶಿಗಳನಿಬರರೆಬತ್ತುಕಾಗಿರುವ
ಲಲನೆಯರ ಕೊರಳ ಸುತ್ತಲ್ ಬೆಳೆಸಿಕೊಂಡಿರುವ ನೀಳಕುಂತಳ ದಾಮರು ।
ಬಲಿಗಳೀ ಕೇಶಗಣರಾಜ್ಯದಲಿ ಕೇಶಿಯೋ
ಕಲಿ, ಸಕೇಶಿ ವಿಕೇಶಿಗಿಂತಲೂ ಹೆಚ್ಚಿನವ

ಚಳಿಗೂದಲಿಳಿಬಿಟ್ಟು ಹಣೆಯುವ ಪಪಾಡಪುರುಷೋತ್ತಮನು
ಕುರಿಜನರಿಗೆ॥೧೧॥

ಸಂಶೋಧಿಸಿದರೆ ಸಿಗುವುದು ಕೂದಲು
ಸಂಶಂಬಿಸಿದರೆ ಸಿಗುವುದು ಕೂದಲು
ದಂಪಿಸೆ ತಿನಿಸನು ಸಿಗುವುದು ಕೂದಲು ಮನೆಮೆಟ್ಟಿಲ ಮೇಲೆ।
ಅಂಶುಕಕಂಟುಗು ಕುಳಿತರೆ ಕೂದಲು
ವಂಶೋತ್ತಮರಲಿ ಹರಿದರೆ ಕೂದಲು
ಶಂಕೆ ಕಜಾವಿಲ ತರುಣಗೆ ಮೀಸೆಯು ಮೂಡಿಹ ಕನ್ನಿಕೆಗೆ ॥೧೨॥

ಸರ್ವಂ ಖಲ್ವಿದ ಮೊಸೀದ್ ಬ್ರಹ್ಮ
ಸರ್ವಂ ತೋರ್ಪಂ ಬಾಲದ ಹಮ್ಮ
ಡಾರ್ವಿನ್ ವಂಶದ ಕಪಿಯಿವರಮ್ಮ
ಪೂರ್ವೋತ್ತರಗಳ ಗಣಿಸದೆ ತಿಮ್ಮ
ಇವರ ಮಾಬಿಂಡ ಕಜಾಕ್ಷ ಕಜೋದರ
ನವನಿರ್ಮಾಣ ಸ್ಫೂರ್ತಿ ಕಜಾಕರ
ಅವಿನೀತರ ನಾದರಿಸುವ ನರವರ
ಕವಿಕೋವಿ ಸುಪ್ರತಿನಿಧಿ ಮೂರ್ಖರ ॥೧೩॥

ಇಂತಿರ್ಪ ಕೇಶದರ್ಶನ ಸಾರೋದ್ಧಾರ ಪರಾಯಣರ ದೇಶದೊಳ್—
ಕುರಿಯಲಿ ಗೂಳಿಯು ಕೂದಲು ಕಾಣುಗು
ಪತ್ನಿಗೆ ಕುರಿಯುಣ್ಣೆಯಾ ಮೃದೋರುಗು
ಕುಮಾರಿಗೆ ಕತ್ತೆಯು ಬಾಲವು ಬೆಳೆವುದು
ಪಿತೃಚೋರಗೆ ಕೂದಲುಗಳು ದೊಳೆವುವು ॥೧೪॥

ರಾಜಕಾರಣ ಕೂದಲೆಳೆಯ ಮೇಲೇ ನಡೆಗು
ಯೋಜನೆ ಕಚಾಸ್ತ್ರ, ಜನೋಪಕಾರೋದ್ಯಮಗ-
ಳೋಜೆಯಲಿ ಚೌರಿಚಾಮರಗಳ ತಯಾರಿಕೆ ಸಮಸ್ತಾಗ್ರವರ್ತಿ
ಯಕ್ಕು।
ಘೋಜ್ಯವಾದೀತು ಕೂದಲು ಹೋಟೇಲುಗಳಲ್ಲಿ
ವ್ಯಾಜ್ಯವಾದೀತು ಕೂದಲಿನಿನ್‌ಶುರೆನ್ಸಿಂಗೆ
ಪೂಜ್ಯ ಕೂದಲ ದೇವ ಓಪ್ಪೀಶ ಹಪ್ಪುಕಳ್ಳರಿಗೆ ಸರಿದೊರೆ
ಯಾಗಿಹ ॥ ೧೫ ॥

ಸರ್ವದ್ವಾರಸಮಾನಂದಾ: ಕೇಶಕಂಬಲಧಾರಿಣಃ
ಕೃತ್ಯಾಕೃತ್ಯಾನಭಿಜ್ಞಾಶ್ಚ ನವದ್ವಾರಕಚಾಂಬರಾಃ ॥ ೧೬ ॥

VII
ಕಂಠ ಪ್ರಜ್ಞಾ ವಿಲಾಸವೆಂಬ ಏಳನೆಯ ಸರ್ಗ

The World of Gutturals

ಘಂಟಾಸ್ವರ, ಶಂಖಸ್ವರ, ಕಾಹಲಿಕಲನಾದ
ಟಂಕಾರಿಗೊ ಅವರೇ ಜನಜಂಗುಳಿಗಾಮೋದ।
ಘ್ಯಾಂಟಂ ಸಮ ಕಂಠಕ್ರಿಯೆ ಈ ರಾಜ್ಯದ ಭಾಷೆ
ಘಂಟೆಗಳೇ ಧ್ವಜಚಿಹ್ನಗಳಭಿಮಾನದ ಮೂಷೆ || ೧ ||

ಉಚ್ಚಸ್ವರರೇ ಉಚ್ಚರ್
ತುಚ್ಛರ್ ಮಂದಸ್ವರರ್ ಮಹಾಮುಖಿಷಾಘರ್।
ಪ್ರಶ್ನಪ್ರತಿಭರ್ ಪ್ರಜೆಗಳ್
ನಿಷ್ಣಾತರ್ ಕೂಗು ಮೆರವಣಿಗೆಗಳ ನಡೆಸಲ್ || ೨ ||

ತಂಬೂರಿಗಂಟಲಿಗರನು ಮೀರ್ದು ಕಿರಿಚಬಹ
ಬಂಬುವಾದ್ಯದ ರಾಗವುಳ್ಳ ರಾಸಭಸಮರು
ಕಂಬವಾಗಿಹರು ರಾಷ್ಟ್ರದ ಕಟ್ಟಡಕ್ಕೆನಲ್ ಜಂಬುಕವು ಮೆಚ್ಚದಿಹುದೇ? ।
ನಂಬಿದವರನ್ನು ವಂಚಿಸುವ ಕಂಠಾಗ್ರಹದ
ಜಂಘಾಲಿಗಳ್ ಧುರೀಣರ್ ದೇಶದಾದ್ಯಂತ
ಗೊಂಬೆಗಳವೊಲ್ ಮೂಕರಾದಾರು ಮತದಾರರೀಮಹಾಧ್ವಾನದಲ್ಲಿ || ೩ ||

ಇರುಳೊಳ್ ರಾಗದರೋಗಕೆ ಮನ್ನಣೆ
ಪಗಲೊಳ್ ರಾಗದ ರೇಗಿಗೆ ಮನ್ನಣೆ
ಕುರಿಗಾಹಿಯುಕಂಠದೊಳುಂ ರಾಗದ ಬುರುಡೆಯು ಸಂಗೀತ|
ಅರಿವಿಗೆ ರಾಗಂ ಮರೆವಿಗೆ ರಾಗಂ
ತಿರುಗಿಸುತಿದೆ ಟ್ರಾನ್ಜಿಸ್ಟರ್ ಗುಂಡಿಯು
ಹರಿಹರಕಮಲಜರೂ ಮರುಳಾಗರೆ ಕಂಠಕಲಾಗ್ರಣಿಗೆ || ೪ ||

ರಾಗ ರಸ ಪದಕಸ ಪ್ರಜಾಪ್ರಭು-
ಮೇಘರಾಜ್ಯದ ಮೋಘಕಾರ್ತ್ಯ
ಯೋಗ ಸಮಿತಿಗಳಲ್ಲಿ ನಾದಬ್ರಹ್ಮ ಪರಮಾರ್ಥ ।
ಸ್ಲೋಗನೇ (Slogan) (gun)ಗನ್ ಎಂದು ನಂಬಿದ
ಕೂಗರಸ ಮುಷ್ಕರ ಮಹಾರಸ
ತೂಗನೇ ಆಡಳಿತ ತೊಟ್ಟಿಲೊಳಿಲ್ಲ ಹತಶಿರರ ॥ ೫ ॥
ಜಳಿಯಿಸಲಮರಾಬಳಮಂ
ತುಳುಂಕಲಂಭೋನಿಧಾನಮಂ ಸಿಡಿದೆದ್ದು ।
ಕಲಕಲ್ ಸರಕಾರಂಗಳ
ನಳುಂಕರುಚ್ಚೈಃಸ್ವರರ್ ಘನಪ್ರತಿನಿಧಿಗಳ್ ॥೬॥
ರಾವಣಾಧಿಕಕಂಠ ಮುಖ್ಯಮಂತ್ರೀಶ್ವರನು
ದುಂದುಭಿಸ್ವರರ ಸಚಿವೀಯ ಸಂಪುಟ ಮಾಡಿ
ಮಾರೀಚನಾಕಾಶವಾಣಿ ಮಂತ್ರಿತ್ವದೊಳ್ ಕೂಗುಗಳ ಕೊಡಲು ನಿಂತು ।
"ಶ್ರೀ ವನಿತೆಯುನ್ನಾಳುವಧಿಕಾರ ಪಡೆಯುವೊಡೆ
ನೀವೆಲ್ಲ ಹೆಗ್ಗಂಟಲಿರಾಗಬೇಕಯ್ಯ
ಈ ವಿಧದ ಟ್ರೇನಿಂಗು ಕಾಲೇಜ ಗಿರಿಗಳಲಿ ನಾಳೆಯೇ ಸ್ಥಾಪಿಸುವನು ॥೭॥

"ಅತಿಕೋಳಿ ಅತಿನವಿಲು, ಅತ್ಯುಷ್ಟ್ರ, ಅತಿಹಸ್ತಿ
ಅತಿಸಿಂಹ, ಅತಿಕತ್ತೆ, ಅತಿಹಂದಿ ಮುಂತಾದ
ರತುನದಂತದ ಬಿರುದುಗಳ ಪಡೆಯಬಹುದಿಲ್ಲಿ
ಸತತ ಪ್ರಯತ್ನದಿಂ ಕಂಠಬಲಮಂ ಬೆಳೆಸೆ:
ಕೂಗು ಪಂಡಿತರತ್ನ, ಕಿರಿಚು ಪಂಡಿತರಾಜ
ಬೌಗುಟ್ಟುವರ ಗಂಡ ಮಿಯ್ಯಾಂವ್ ಸ್ವರರ ಮಿಂಡ
ಗೌಜಿಗರ ಶಂಖನಾದಂ ಗೊಂದಲದ ಕಹಳೆ
ಓಜ ಘೀಳಿಗರ ಮೇಣ್ ಗೂಬೆಗಳ ಗುರುರಾಜ
ಮಾರ್ಜಾಲಗಳನೋಡಿಸುವ ಘೀಳಿಕಂಠ ॥ ೮ ॥

ಮಿಂಚಿ ಕಿವಿಗಡಚಿಕ್ಕುವ ಅನೇಕಾನೇಕ ಬಿರುದುಗಳನ್ನು
ನಮ್ಮ ರಾಜಾತಿರಾಜರಾದ ಮಂತ್ರೀಶ್ವರರ ಮಹಾಸಭೆಗಳಲ್ಲಿ ಮಿಂಚಲಾದೀತಂ!
ಗಂಟಲ ಬಂಟರ ನೆರವಿಯಾ
ಕಂಠೀರವರಷ್ಟೆ ಪೊಗಳಿಕೆಗೆ ಭಾಜನರೀ।
ಕಂಠ ಪರಾಕ್ರಮ ರಾಜ್ಯದ
ನೆಂಟರೆ ನೀವ್ ಕೇಳಿಂದು ಗುಡುಗಿದನಾತಂ ॥ ೯ ॥

ಗೊಣಗುವ ಪ್ರಜೆಗಳ ಸುಲಿಯುವ
ಗಣರಾಜ್ಯಂ ಗದ್ದಲಿಗರ ಗಂಟಂ ಬೆಳೆಸಲ್।
ಹಣಗೂಡಿಸುವಹಾವಳಿವಳ
ವಸತೆನಿತನೊ ನಡೆಯಿಸಿರ್ಪುದಿದಕೆಣೆಯುಂಟೇ ॥ ೧೦ ॥
ಸ್ಮಾರಕನಿಧಿ ಪತ್ರಿಕೆಗಳ
ಪಾರಾನ್ನದನಿಧಿ ಮಹೋದ್ಯಮದ ನಿಧಿ ಮತ್ತಂ।
ಆರಯಲರುವತ್ತರ ನಿಧಿ
ಕಾರ್‌ನಿಧಿ ಕಾವಣ್ಣನಿಧಿಗಳೊಂದೇ ಎರಡೇ? ॥೧೧॥
ಕೂಗಾಳುಗಳ ಸಂಘ, ಪುರಸ್ಕರ, ಮಹಾಗಲಭೆ
ತೇಗಾಳುಗಳ ಗುಂಪು ಕಲ್ಲೆಸೆತ ಗಾಜೊಡೆವ
ಯೋಗಶಕ್ತಿ ರಹಸ್ಯ ಮರಣವನ್ನೊಡರಿಸುವ ರಾಜತಂತ್ರಗಳ ಹಿಡಿದು।
ಭೋಗಿಗಳ್ ಬಹುಸಂಖ್ಯರಂ ಪೀಡಿಸುತ್ತಿರುವ
ನಾಗಲೋಕವಿದಯ್ಯ ಪೀಡಿತರ್ ಪಾಪಿಗಳ್
ಹಾಗೆಯೇ ಹುಟ್ಟಿದವರನ್ಯಾಯಗಿನ್ಯಾಯ ಕರ್ಥವೇ ಇಲ್ಲವೆಂಬರ್॥ ೧೨ ॥

ಕುಂಬಳಕಾಯಿಳಿದೀತಾ
ನಂಬಿದರಂ ನುಂಗಲೇಳ್ವ ಗಳದಂಗಳದೊಳ್।
ತಂಬಿಗೆ ಬಾಟಲಿ ರಸವಂ
ತುಂಬಾಯದಿನೀಂಟಿ ತೇಗುವಬ್ಬರ ವೇನೋ ॥ ೧೩ ॥

ಪಾನ ಪ್ರತಿಬಂಧಂ ಬಡಜನರಿಗೆ
ಯಾನಪ್ರತಿವಿಘ್ನಂ ಧನಹೀನಗೆ
ಕಾನೂನೆಲ್ಲಾ ಲಕ್ಷ್ಮೀ ಸುತರಿಗೆ
ವಾನಪ್ರಸ್ಥಂ ಪ್ರಾಮಾಣಿಕರಿಗೆ! ॥೧೪॥

ಭಾರತ ಗಿಂಜೆ ಸ್ವರವುಳ್ಳವನಿಗೆ ಭಾರೀ ಬಹುಮಾನ।
ಶ್ರೀರಮಣರು ಮುಂದಿಟ್ಟಂಥವರವರೊಡರಿದ್ದೇ ಸುಜ್ಞಾನ ॥೧೫॥

ಮೋಜು ಕುರ್ಚಿ ಮೈಕುಗಿಯ್ಯು
ಸುತ್ತಿಗೆಗಳ ಸದೆವವ ।
ಭೋಜ ಸಭಾಧ್ಯಕ್ಷನವನ
ಕೂಗೆ ನಾಡಿನುತ್ಸವ ॥೧೬॥

ಗಂಟಲ ಮೇಲೇ ನಿದ್ದೀ
ತೆಂಟೆದೆಯುವಗೆಂದು ಕೇಳ ಬೇಡಿರಿ ಕುಡುಕಂ।
ಬಂಟರೊಳಗ್ರ ಕಬಂಧಂ
ತುಂಟಂ ರಾಜ್ಯೇಶ್ವರಂ ನಮೋ ಎನಬೇಕೈ ॥೧೭॥

ದಂಡಧರವಾಹನ ಧ್ವನಿ
ಮುಂಡೆಯುನದಕಿದಕೆಮಾರಿ ಕಳಕೊಂಡವರಂ।
ಉಂಡುರಿಗು ರೇಸುಲಾಟರಿ
ಗುಂಡಾಗಿರಿ ಗುಪ್ತಮಾರಣಂಗಳನೇಕಂ ॥೧೮॥

ಪದಶಬ್ದಾಕ್ಷರವಾಕ್ಯಗ
ಳ್ಗದೆಲ್ಲಿ ಬಂತರ್ಥ? ಸಿರ್ವಿಚಾರ ಧ್ವನಿಗಳ್।
ಪುದಿದಿರೆ ಕಂಠಂಗಳಿಗುಂ
ಪದಾರ್ಥಸಂಬಂಧವಾಯ್ತುನೂಹ್ಯಂ ಧರೆಯೊಳ್ ॥೧೯॥

ಗುರುಗೃಹದಾಹಮುನುಂ ಗಡ
ನರರುಸಿರರ್ ಪದವೆ ಶಾಸಕಾಗ್ರೇಸರರೊಳ್।

ಸ್ವರಬಲವೋಂಕಾರಾಧಿಕ-
ಮರಿಶರಭಂಗಳ್ಗವಾಯ್ತು ಭೇರುಂಡಂ ಕೇಳ್ ॥ ೨೦ ॥

ಸ್ವಾರ್ಥಸ್ವರಂ ಪ್ರಧಾನಂ
ಧೂರ್ತಸ್ವರಮುಚ್ಚಮಧಿಕಮಂತರ್ಗೂಢಂ ।
ರಾತ್ರಿಂಚರ ರಾಜ್ಯದೊಳೀ
ಕ್ಷಾತ್ರಂ ನವ್ಯಂ ನಿರಂಕುಶಂ ನಿರ್ಭೇದ್ಯಂ ॥ ೨೧ ॥

ಮೌನವಿದಲ್ಲಂ; ಮಾತೇ?
ಮಾತಲ್ಲಂ ನೀತಿಯಲ್ಲವೀ ದುರ್ಧ್ಯಾನಂ।
ಜ್ಞಾನಾತೀತಂ ಷಡ್ರಿಪು-
ಧಾಮದೊಳಾಳುವರೆ ಗರಳಗೊರಳಿಗರಾದರ್ ॥ ೨೨ ॥

VIII

ನಖ ಪ್ರಜ್ಞಾವಿಲಾಸವೆಂಬ ಎಂಟನೆಯ ಸರ್ಗ

The World of Nailists

ವಿದ್ಯುಚ್ಚಲಾಂಭೋಜಕೋಶವೇರಿದ ರೋಬೋಟ್
ರವಿಶಶಿಗ್ರಹ ತಾರೆ ನೀಹಾರಿಕೆಗಳೆಂಬ
ಅಂಕೆಗೊಳಗಾಗದವಯವಿಗಳನ್ನುಗುರಿಂದ
ಔಂಕಿ ಹಿಡಿದಾಳುತಿಹನಾಕಾಶವನು ಮೆಟ್ಟಿ! ॥ ೧ ॥

“ಅಣುಶಕ್ತಿ ಪ್ರಧಾನಾಯೈ
ಹೈಡ್ರೋಜನ್ ಬಾಂಬು ಹಸ್ತಿನಿ।
ರಾಕೆಟ್–ಸ್ಫುಟ್ನಿಗ್ವಾಹನಾಯೈ
ನಖಾಸ್ತ್ರಾಯೈನಮೋ ನಮಃ” ॥ ೨ ॥

ಎಂದು ನಿಮಿಷ ನಿಮಿಷಕ್ಕೆ ಹೊಗಳಿಕೆಯ ಹಂಚುವರ್
ಕೊಳಕುವೆಣ್ಗಳ್ ಪುಳುಕು ಹುರುಕುಗುರುಗನ್ನೆಯರ್
ಸಂದಿ ಸಂದಿಗಳಲ್ಲಿ ಸೀಅಯ್ಡಿಯಾಗಿಹರ್
ಬಂಧುಗಳನುಂ ಹೇಸದಿರಿವ ಹೆಮ್ಮಾರಿಯರ್ ॥ ೩ ॥

ಆಶಿಹಿಟ್ಲರನಾದಾಕೆಯೊ
ಪತಿಗಿತಿಗಳ ಗತಿಯನೆಣಿಸದಾಳುವ ಯಂತ್ರಂ।
ಖತಿ ಮಗನನ್ನನುಸರಿಸದ
ಸ್ಥಿತಿವಂತರ ಮೇಲೆ ಚಿವುಟಿ ಹಾಕುವುದವರ ॥ ೪ ॥

ಸರ್ವನಖಮಯಶರೀರೆ।
ಸರ್ವದಾ। ದುರ್ವಿನಯ ನಖ ವಿಕಾರೆ।

ಚರ್ಮಾಸ್ಥಿ ಮಾಂಸ ಖಂಡ।
ವಲ್ಲವೂ। ದುರ್ಮದೋದ್ಧತನಖೋತ್ಥ ॥ ೫ ॥

ಆ ಸರ್ವಾಧಿಕಾರಿಣಿಯಾವ ಸರ್ವಾಸುರಿಯ ರಾಜ್ಯದೊಳ್
ನಖಮುಖಿಯರ್ ನಖನೇತ್ರೆಯ-
ರಖಿಲರ್ ದುಃಸಚಿವೆಯರ್ ಮಹಾದುರ್ಮಂತ್ರರ್।
ಸಕಲವಿಧ ಸೇವಕರ್ ಶತ-
ಶಕಾರರಂ ಮೀರಿಸಿರ್ಪರೆನಲೆಣೆಯುಂಟೇ? ॥ ೬ ॥

ಋಕ್ಷನಖರಕ್ಷಚತುರರ್
ಭಕ್ಷಣಕೆಂದೇ ದರಿದ್ರರಂ ಬಸಿರ್ಬಗೆದು।
ಪ್ರಖ್ಯಾತರೆನಿಸಿಕೊಂಡರ್
ದುಃಖಾರ್ತರನಳಿಸಿ ನಿಮ್ನರಂ ಮೇಲೆತ್ತಿ ॥ ೭ ॥

ಬೇಕಾದವರೇ ನಿಮ್ನರ್
ಬೇಡಾದವರೆಲ್ಲರಗ್ನಿಹೋತ್ರಿಬ್ರಹ್ಮರ್।
ಶಾಕಿನಿ ಡಾಕಿನಿಯರ್ ತಾವ್
ಮೂಕತೆಯಂ ತಾಳ್ದು ನಿಂತರೀ ಮಾರಿಯೆದುರ್ ॥ ೮ ॥

ಶೂರ್ಪಣಖೆಯಾರ್ಪದೆಷ್ಟ
ಕಾರ್ಪಣ್ಯ ಪ್ರಭೆಯ ನಖಗಳಾಕೆಯ ಕೈಯೊಳ್।
ತೀರ್ಪಾಕೆಯದೇ ಕಾಯುದೆ
ನೇರ್ಪೆನ್ನಲೆ ಬೇಕು ಬದುಕುವಾಸೆಯನುಳ್ಳರ್ ॥ ೯ ॥

ನಖಧರ್ಮಂ ಬರಗುವುದೇ
ಶಿಕಾರಿ ಶೂರರ್ಗೆ ನಖಮುಖೇಶ್ವರಿ ಯಡಿಯೊಳ್।
ಅಖಿಲಮನರ್ಪಿಸಿ ಸುಖಿಸುವ
ವಿಕಾರಿಗಳ್ ಪ್ರಾಧಿಕಾರಿಗಳ್ ಗತಲಜ್ಜರ್ ॥ ೧೦ ॥

ದಿಲ್ಲೀಶ್ವರಿ ಧನಿಕೇಶ್ವರಿ
ಕಳ್ಳವ್ಯಾಪಾರಿಗಳ್ಗೆ ರಕ್ಷಿಕೆಯಾದಳ್।

ದಲ್ಲಾಲಿಗಳರಸಿತಿ ತಾಂ
ಮಾರ್ಲಿತೆ ದುರಾಗ್ರಹ ಪ್ರಧಾನಸಮಾಗ್ರೀ ॥ ೧೧ ॥

ನಿಮ್ಮಯ ಮೃಗಪಕ್ಷಿಕ್ರಿಮಿ
ಬಕಭೇಕ ಪ್ರಕರ ಘೂಕಯೂಕಾನೀಕಂ।
ನಿಮಿರಾಜ್ಯದೊಳುದಿಸಿದವೆನೆ
ಪ್ರಕಾರವೆಂತಾ ಮಹೋಗ್ರನಿಮಿ ಶಾಸನದ ॥ ೧೨ ॥

ದೀನರ ಹಕ್ಕಂ ಕಸಿಯಲ್
ಕಾನನಬಾಂಬೊಂದನೆಸೆವಳಾಪತ್ಕಾಲಂ।
ದಾನವರ ಪರ್ವಮಾಯ್ತು:ನ-
ಮಾನೀಯರ್ ಸತ್ಯಸಂಧರಾದವರೆಲ್ಲರ್! ॥ ೧೩ ॥

ಬದಲು ಬದಲು ಬದಲು ರಾಷ್ಟ್ರವೆಲ್ಲ ಬದಲು ಬದಲು
ಭಾಗ್ಯವಿಧಾಯಕನವರ ಮೌಲ್ಯರಾಶಿಯೆಲ್ಲ ಬದಲು!
ಶಾಸ್ತ್ರಕಲೆಗಳಲ್ಲಿ ನಿಮಿಪ್ರತಿಮೆಗಳ ವಿಧಾನ
ಆ ವಿಧಾನಗಳಲಿ ನಿಮಿಚಿತ್ತತಗಳೇ ಪ್ರಧಾನ!
ಮಕ್ಕಳ ಪಠಣಗಳಲಿ ನಿಮಿಸೂತ್ರಗ್ರಹಣ
ಕ್ರಿಯಾಗ್ರಹಣಗಳಲಿ ನಿಮಿಕ್ರೀಡೆಗೆ ಪ್ರಾಧಾನ್ಯ ॥ ೧೪ ॥

ನಿಮಿಸುಮಿತ್ರಶೋಭರಾದರು
ಪ್ರಮುಖರೆಲ್ಲ। ಪ್ರವರವರ್ಣನಿಮಿಪ ತಳೆದರು!
ಮಿಕಾಡೋಕಿಮೋನು ತೊಡಿದರು
ನಿಜತೆಯಲ್ಲಿ। ಪ್ರಕಟವಾಗಿ ತಿರುಗಲಿದ್ದರು! ॥ ೧೫ ॥

ಭಾಗಾರ ದುಷ್ಕೃತ್ಯವನು ಕಲಿತರು
ತಿಂಗಳ ಪರಿದು। ಹಗಲಿಕೊಂದು ಜನರ ಸುಲಿದರು।
ನಿಗಮಮಿಕ್ರಮಕರ್ಣಿದ್ದರು
ವ ಸೇನಾಂಗಗಳ। ಸುಮಿಕಿ ಬಂಗಲೆಗಳೊಳಸೆದರು ॥ ೧೬ ॥

ಒಬ್ಬ ಮಾತನಾಡಿದರಿನ್ನೊಬ್ಬಗೆ ತುರಿಕೆ
ಅಸೆಂಬ್ಲಿಯಲಿ ಚೆಲ್ಲುವದೂ ಚುರುಚಿಯ ಗರಿಕೆ।
ಸಭಾಷೆಯೊ ಮೊನಚು ಮೊನಚು
ಪ್ರಶ್ನೆಗಿಲ್ಲಕಾಲ ಗಡಚು
ಯಾವಾಗಲೂ ಸೆಕೆ ಸೆಕೆ ಸೆಕೆ
ಮನುಷ್ಯಸಂಬಂಧಕ್ಕೆ! ॥ ೧೭ ॥

ಹೃದಯದಲಿ ಹುಲಿಕರಡಿಯುಗುರುಗಳು ಬೆಳೆದಿರಲು
ಜಾತಿವೈರದ ಬೆಂಕಿಯನ್ನು ಹೊಟ್ಟೆಯೊಳಿಡಲು
ಬೆದರಿಸುವ ಕೋಪಿ ಬೆನ್ನಟ್ಟಿ ತಾ ಬರುತಿರಲು–
ಭೀತಿಯೊಂದೇ ನೀತಿಯಾದಳಿತಕಾಗಿರಲು-
ಸತ್ಯಪರಿಗತ್ತವರಿಗಿಹುದು ಕಾರಾಗಾರ
ತುತ್ತಿಗಿಲ್ಲದ ಜನರನಡಗಿಸುವ ಪರಿವಾರ
ಸುತ್ತಿರುವುದೆತ್ತಲೂ ಮಂತ್ರಿಗಳ ಬಡಿವಾರ
ಕತ್ತೆತ್ತಿದರೆ ಕಚ್ಚುವುದು ನಖದವತಾರ! ॥ ೧೮ ॥

ಉಗುರು ಕಂಪಿದಲ್ಲಿ ಸಾವಿರಗಳು ಮಾಯವಾಗುವುವು
ಹಗಲುಹಾಜಿಗಳಿಗೆ ರಕ್ಷಣೆಗಳು ಬಂದೊದಗುವುವು
ಹಗಲುಬಂಟರಾದವರಿಗೆ ಸ್ಥಾನಮಾನ ದೊರಕುವುವು-
ಮುಗಿಲ ಮುಟ್ಟಿತಪತ್ರಪೆಯ ಬಾವುಟ! ದುಮ್ಮಾನವು
ಬಗೆಯುತ್ತಿದೆಯು ಸಾಧುವೃತ್ತಿಯವರ, ದುರಾಕ್ರಮಣದಿಂದ
ದುಗುಡ ಹೊತ್ತಿತಂಧಕಾರ ಮುಸುಕಿತವರ ಕಂಗಳಿಂದ
ಹರಿದ ನೀರು ಜಲಧಿಯಾಯ್ತು; ಉಸಿರೆತ್ತಲು ಬಾಯ್ಗೆ ಬಂಧ
ಪತ್ರಿಕೆ–ರೇಡಿಯೊಗಳಿಲ್ಲಿ ಹಲಧರಗೋವಾದವು ॥ ೧೯ ॥

ಕಲಹಕಂಟಕರ ಮುಖಂಡತ್ವದಲಿ ಜನಮನಗಳು ಬಿದ್ದು
ಕಲಲಿಪಿರೂಪಕ್ಕಳಿಯಲವರುಗಳು ಕೊಟ್ಟ ವಚನ ಬಿದ್ದು
ನಿರ್ಮಲತಿರುಗಿಸುವ ವೈಜ್ಞಾನಿಕತೆಯ ಯಂತ್ರವೈದ್ಯಯುದ್ಧ
ಒದರಿದವರ ಪರಲೋಕಕೆ ಕಳಿಸಲು ಅವರ ತಂತ್ರ ಸಿದ್ಧ ॥ ೨೦ ॥

ಉಗುರ ಬಿಚ್ಚುವ ಉಗುರ ಕಚ್ಚುವ
ಆಡಳಿತದಧಿಕಾರಿಗಳ್
ಉಗುರುಸನ್ನೆಯ ಮಾಡಿ ಉಲಿಯುವ
ಜಗಳನಗೆಯೊಳ್ಗನ್ನೆಯರ್ ॥ ೨೧ ॥

ಅವರಿವರಂ ಪರಚುವುದೇ
ಸವಿಮಾತಾ ಸಮಜದೊಳ್ ಸಭಾಸ್ಥಾನಗಳೊಳ್।
ಜವನಂ ಕೆಣಕುವ ಕಾಯ್ದೆಗ-
ಳವನಿಯನೆಡಗಾಲಿನಿಂದವುಂಕಿದವವುಮಾ! ॥ ೨೨ ॥

ಬಾಂಬೊಡೆದಂತೊಡೆದುದಂ ಜನ
ನಂಜಿಸಿ ವಂಚಿಸುವ ವೈದ್ಯಕೀಯದ ಬಲದಿಂ।
ನಂಬಲು ಬಾರದ ವಿಕೃತತೆ
ತುಂಬಿತು ಮೈತುಂಬ ಸತ್ಪ್ರಜಾ ವರ್ಗಗಳ ॥ ೨೩ ॥

ಕೈ ಕಾಲು ಕಣ್ಣುಮೂಗು ವಿ
ಪಾಕದಿನಂಗಾಂಗವಯಂತ ಸಂಖ್ಯೆಯೊಳವರ।
ವೈಕೃತವಾದವು ಮಾಯಾ-
ಶೋಕದಿನಾಳುವರ ನಖವಗುರ್ವಿಸಿಯೆಸೆದ ॥ ೨೪ ॥

ಅಂಥ ಶಾಸನಕಂಜಿ ವಿಕೃತಾಂಗವೇಷವಾಕ್
ಪ್ರಕೃತಿಯುವರನುದಿನವು ನಖವೃದ್ಧ ದೆವ್ವಗಳ
ಮಂದ ಮತಿಯಿಂದ ಪೂಜಿಸಿದರಾ ನರಮೇಧ
ಹಿರೋಶಿಮಾ ನಾಗಾಸಾಕಿಗಳೊಳಾದುದಕ್ಕಿಂತ
ನೂರಾರು ಪಟ್ಟು ದುರ್ಭಿಕ್ಷವಾಯ್ತೆನೆ ಮೂಢ
ಬಂದು ದೈವದ ಪಾತ್ರಿ ಕುಣಿಸಿದಂತೆಯೆ ಕುಣಿವ
ಜೀವ ವೈರಾಜ್ಯದೊಳ್ ಚಂಡಿಕಾಧರ್ಮದೊಳ್!
ಕುಂದೆ ಚಿಪ್ಪುಳಿದ ಕಲೆಯನಳವಡಿಸಿ ಕೊಂಡವರ್!

ಕೊಂಡು ಮುಕುಟವಹೊತ್ತ ಕೋಡಂಗಿ ನಾಯಕರ್
ಕಿಷ್ಕಿಂಧೆಯನ್ನು ನಿರ್ಮಿಸಿದ ಮೂಲ ಮೇಸ್ತ್ರಿಗಳ್
ಉಗುರ ಮೇಲ್ ನಿಗುರಿ ನಿಲ್ಲುವ ನಾಟ್ಯಶಾಸ್ತ್ರಿಗಳ್ ॥ ೩೫ ॥

ಆ ರಾಜ್ಯದೂರುಗಳೊಳ್ —

ಉಗುರುಗಚ್ಚಿನ ಗೋಡೆಗಳ ಹೇ
ರುಗುರುದೋರಣ ಹೊತ್ತ ಕಿಟಿಕಿಯ
ಉಗುರುಸರಗಳ ಗೇಟು ಹಾಕಿದ ಬಂಗಲೆಗಳನ್ನು।
ಉಗುರುಹಂಚಿನ ಮಾಡಿನಚ್ಚಿನ
ಬೆಗಡು ತುಂಬಿದ ಹವೆಯನಾಡಿಸಿ
ನಿಗಡಿಸಿದರೋ ಕಟ್ಟಿಸಿ ಪ್ರತಿಮಾಯ ಮಹಾಪ್ರತಿಭರ್ ॥ ೩೬ ॥

ಎಂಟು ಕೋಡಿನವರು ಬೇಕೆ
ಆರು ಮೊಲೆಗಳವರು ಬೇಕೆ
ಗಂಟು ಮೂಗಿನವರು ಬೇಕೆ
ಪಂಟು ಹೊಡೆವ ಪೋಲಿ ಬೇಕೆ
ಪತ್ತುಬಾಯ ಹನುಮ ಬೇಕೆ
ಪೆಂಟೆಪಿಲ್ಲದಂಥ ತಲೆಯು ಬೇಕೆ ಜನಗಳು ॥ ೩೭ ॥

ವಿಜ್ಞಾನವನೀಬಗೆಯೊಳ್
ತಜ್ಞರ್ ಬಳಸಲ್ ಸುಧಾರಣಾಪರ ಸಚಿವರ್।
ಆಜ್ಞೆಯಂಕೊಟ್ಟುದು ಕಾರಣ-
ಮಜ್ಞಾನಮನೋದಿಸಿಟ್ಟರಾ ಮಕ್ಕಳಿಗೆ ॥ ೩೮ ॥

ಸ್ಥಿರಪಟ್ಟವಾಯ್ತು ಪೈಶಾ-
ಚರ ವಂಶಕ್ಕೆಂದು ಸಂತಸಂಬಟ್ಟಿರ್ಪರ್ಗಳ್।
ಖರನೆಂದು ಪತಿಯಳಿಸೆಂದೋ
ಮುರಿದಿಂಟಿವನೆತ್ತರಂ ಛಲಿ ದೂರೆಸಾಸಿ ॥ ೩೯ ॥

ಪೃಷ್ಠ ಪ್ರಜ್ಞಾ ವಿಲಾಸವೆಂಬ ಒಂಬತ್ತನೆಯ ಸರ್ಗ

IX

The world of Fundamentalists

ತಲೆಗಿಂತ ಪೃಷ್ಠಮಂ ನಾ
ನೆಲಿಗಳ್ ನಂಬಿರ್ಪರಿಲ್ಲಿ ಸರ್ವಶ್ರೇಷ್ಠಂ।
ಕುಳಿತಿರ್ಪ ಕಂತ್ರಿಗದ್ದುಗೆ-
ಯುಳುಂಕುವೊಲ್ ರಾಜರಾಜಸದೃಶಂ ಬೊಡ್ಡಂ ॥೧॥

ಪೃಷ್ಠದೊಳಿರ್ಪುದು ಮಿದುಳೆಂ
ದಟ್ಟಿಮನೇರ್ದಾಳ್ವ ನಾಯಕರ್ ಬೆಂಬಲಿಗರ್।
ಪೃಷ್ಠಪ್ರತಿಷ್ಠೆಗೆಂದೇ
ದುಷ್ಟರ ಸಾಕಿರ್ಪರಂಜಿಸಲ್ ಸಜ್ಜನರಂ ॥೨॥

"ಇರಿ
ಇರಿ
ಬೆನ್ನಿಗಿರಿ
ಗಿರಿಯಂತಹ ಬೆನ್ನಿಗಿರಿ
ಚಿನ್ನದ ಚೂರಿಯಾನು ತೆರೆದು
ಹರಿಯುಂದದಿ ಹಲ್ಲುಕಿರಿದು
ಅರಿತ ಜನರ ಕಂಡು ನಂಬಿಸುತ್ತ ನಿದ್ದೆ ಮಾಡಿಸಿ
ಪರಿವರಿಪಯು ಪೊಗಕೆ ಮುಂಚೆ ವಿವಿಧ ಪಿಶಾಚನೂಡಿಸಿ
ವ್ಯಾಪಾರದ ಕತ್ತಿಯಿಂದ
ವ್ಯವಹಾರದ ಶೂಲದಿಂದ
ಬಾಡಿಗೆದ್ರ ದೀಟಿಯಿಂದ
ದೇಶಾವರಿ ನಗೆಗಳಿಂದ
ಒಘತಿಗಳನು ಭಗ್ನಿಸು

ವರ್ಗಾವಣೆ ಹಿಗ್ಗಿಸು
ನಿಂತ ನೆಲವೆ ಕುಸಿಯುವಂತೆ
ಖಡ್ಡಗಳನು ನಿರ್ಮಿಸು
ಮಕುಟ ಕಚ್ಚಿ ಹಾರುವಂತೆ
ಸರ್ಪಾಸ್ತ್ರವ ಘೂರ್ಮಿಸು ॥೩॥

ವೈಟ್ ಕಾಲರ್ ವರ್ಕರಾಗಿ
ಮಧ್ಯವರ್ಗ ವೈಶ್ಯನಾಗಿ
ಬದ್ನಾಮಿಸು ಮಿತ್ರರ
ಸುಮನಃಶತಪತ್ರರ ॥೪॥

ಎಂಬುದು ಧುರೀಣರು ಪ್ರಕಾಶಕರಿಗಿತ್ತ ಗುಪ್ತಾದೇಶವಾಗಲ್–
ಅವರ ಅನುಯಾಯಿಗಳಂತೆಯೇ ಎಸಗಲ್

ಕುದುರಾಳನ ಹೃದಯ ಶಾಳಿ
ಹಾಲಾಹಲ ಹೊಯ್ದು ದಾಳಿ
ಮಾಡದೆ ಜಯವುಂಟೆ ಹೇಳಿ
ಪಂಚೇಂದ್ರಿಯ ಸೌಖ್ಯಕೆ
ಬೃಹತ್ಪೃಷ್ಠಲೋಕಕೆ ॥೫॥
ಪ್ರಜೆಗಳನ್ನು ದುಡಿಯ ಹಚ್ಚಿ
ದಂಡಿಗೆಗಳ ಹೊರಲು ಪಚ್ಚಿ
ದ್ವಿಜರನೆಲ್ಲ; ಪಾಪಕರ್ಮಿಗಳನು ಹೆಚ್ಚಿಸಿ
ಮಜವ ಮಾಡಿ ತಿರುಗುವಂಥ
ಗಜಾಸುರರ ಪೃಷ್ಠದಿಪ್ಟ
ಯಜಮಾನಿಕೆಯೆಲ್ಲೆಲ್ಲೂ ಕಡ್ಡಿ ಚುಚ್ಚಿಸಿ ॥೬॥

ರಾವಣನೇ ಮಹೋದಾತ್ತ
ಕೌರವನೇ ಧರ್ಮಪುತ್ರ

ಶೀ [illegible] ಸರ್ವಪಾಲ ಪೃಷ್ಠ ರಾಜ್ಯದಾಳ್ಕೆಯೊಳ್।
ಹಿರಣ್ಯಾಕ್ಷ ಹಿರಿಯ ಮಂತ್ರಿ
ಪರಸ್ವಾಪಹಾರ ಸೂತ್ರಿ
ನರಾಧಮರೆ ನರೋತ್ತಮರು ಪೃಷ್ಠ ಶ್ರೀಮಂತರೊಳ್ ॥ ೭ ||

Gold begets in brethren hate
Gold in families debate
Gold does friendship separate
Gold does civil war create ॥ ೮ ॥

ರಾಷ್ಟ್ರ ರಾಷ್ಟ್ರಗಳಲಿ ಚಿನ್ನ
ದನ್ನಕಾಗಿ ಕಲಹವೆದ್ದು
ಕಾಲಾಗ್ನಿಯಲೀಲೆ ಮತ್ತೆ ಪ್ರಾರಂಭಿಸದಿರುವುದೇ?
ಒಬ್ಬೊಬ್ಬ ಪ್ರಜೆಯಲ್ಲೂ
ಹುಟ್ಟಿದೀರ್ಷ್ಯೆಯಗ್ನಿ ಕೂಡಿ
ವಡವಾನಲನಾಗಿ ಬೆಳೆದು ನೀರ್‌ನೆಲಗಳನುಂಗದೇ? ॥ ೯ ॥

ನಾಗರಿಕತೆಯೆಂಬ ನಾಟ್ಯ-
ಮೋಸಕಾವತಾರದೆದುರು
ಅಮೇರಿಕಾಚೀನರಶಿಯ ಮುಗ್ಧವಾದ ಹಾಗೆಯೇ।
ಯೂನಿವರ್ಸಿಟಿಗಳ ಹಿಡಿದು
ಸರ್ವಸಂಘ ಸಂಸ್ಥೆಯೊಳೂ
ವ್ಯಕ್ತಿಲೋಭದುರಿಯೆದ್ದುದು ರಾಷ್ಟ್ರಹಾನಿಗಾಗಿಯೇ ॥ ೧೦ ||

ಅಜ್ಮೀರದ ಹತ್ತಿರದಲಿ
ಶಂಬಲ ಪ್ರದೇಶದಲ್ಲಿ
ಕಲ್ಕಿ ಹುಟ್ಟಿ ಬರುವನಂತೆ ಅದಕ್ಕಿದೋ ಸಿದ್ಧತೆ!
ಕಂಟಕಾರಿಹಾರಧಾರಿ
ಬಂಟನಾಗಿ ಬರುವನಂತೆ
ಪುಂಟುಗಳನು ದಂಗುಬಡಿಸಲದಕ್ಕಿದೋ ಸಿದ್ಧತೆ! || ೧೧ ॥

ಕರ್ತವ್ಯದ ಮೋರೆಗಡ್ಡ
ಜಾಚಿ ಕುಳಿತು ಪೃಷ್ಠವನ್ನು
ಕಬ್ಬನ್ ಪಾರ್ಕ್ ಹೋಟೆಲಲ್ಲಿ ಕಾಫಿ ಕುಡಿವ ಶುದ್ಧತೆ ।
ಕೌಟಿಲ್ಯದೆ ಕಾಲವನ್ನು
ನೂಕುವುದೇ ನಿತ್ಯಧರ್ಮ
ರೂಪಾಯಿಂಗೆ ಬಾಯಿಂನೀರು ಬಿಡುವುದೆ ಸಾರ್ಥ್ಯದಯ ॥೧೨

ಸಂಬಳವೋ ಗಿಂಬಳವೋ
ಭತ್ಯವೊ ಬಾಯ್ಬುಡಿಗೆಗಳೋ
ಯಾವುದಾದರೇನದಕೇ
ಯಾರನಾರು ಇರಿದರೇನು
ತರಿದರೇನು ಮುರಿದರೇನು
ಆದೇ ನಿತ್ಯ ನಡೆಯುವಾಗ ಅಳು-ಅಂಜಿಕೆಯೇತಕೆ? ॥ ೧೩ ॥

ಸಿಕ್ಕಿದ್ದನು ಸೆಳೆದುಕೊಂಬ
ರಾಜ ತಂತ್ರದಿಂದ ದೊಂಬ
ರಾಟವಾಡದವನು ಹುಂಬ ನಡೆ ನೀನೂ ಮೇಲಕೆ । ॥ ೧೪ ॥

ಕುಸ್ತವನು ಒಂದೆ ಎದ್ದವನು ಒಂದೆ ಪೃಷ್ಠಪ್ರಮಾಣದಿಂದ
ದೊಡ್ಡವನೆ ದೊಡ್ಡವನು ಕುಳಿತ ಕಾರಿನಾರ್ಭಟದಪ್ರೋಟದಿಂದ ।
ದಿಡ್ಡಿ ಮಡೆಯು ಮುಟ್ಟಾಳ ಲಂಚವನು ತೆಗೆದು ಕೊಳ್ಳದೆಬಿಡ
ದಿಡ್ಡಿನಿಂದ ದೊಡ್ಡಸ್ಥನಾವನೋ ಅವನ ಕುಂದೆಯೆ ಬಡಾ ॥ ೧೫ ॥

ಪೃಷ್ಠ ಭಾಷೆಯೇ ಭಾಷೆ ಯೋಗಿಗಳು "ಪರಾ" ಎಂಬರದನು
ಸ್ಪಷ್ಟ ಪೇಷಣಪೆಸೆಂಬ್ಲಿಪಾದ ಮಾರುಳ್ಗೊಳಿಸೆ ಜನಗಳನ್ನು ।
ಪೃಷ್ಠಹಾಸವೇ ಅಟ್ಟಹಾಸ ಕೈಲಾಸಗಿರಿಯವಾಸ
ಸ್ಪಷ್ಟವೆಲ್ಲಿ ಬಡ ಪೃಷ್ಠರಿಂಗೆ ಕೃತಪೂರ್ವಜನ್ಮದೋಷ ॥ ೧೬ ॥

ಪೃಷ್ಟಪ್ರಕಟನ ಚತುರರ್
ಪೃಷ್ಟಪರಾಕ್ರಮಿಗಳಿದ್ದ ಗದ್ದುಗೆ ಬಿಡದ ।
ಪಟ್ಟಾಭಿರಾಮರಾದರ್
ನಷ್ಟಕ್ಕುಳಿದೆಲ್ಲ ಪೃಷ್ಟರೇಖಾಹೀನರ್ ॥ ೧೭ ॥

ಪೃಷ್ಟಭಾರವೇ ರಾಜ್ಯಭಾರನಿರ್ವಾಹಕತೆಗೆ ನಿಕಷ
ಛಟ್ಟಂಗಿಗಳನ್ನಿಟ್ಟುಕೊಳ್ಳದಿರೆ ಬಾಳೆಲ್ಲಾ ವಿರಸ ।
ಅಟ್ಟವೇರಿ ಒದೆದೇಣಿಯನ್ನು ನಿಷ್ಪಕ್ಷ ಪಾತದಿಂದ
ಬಿಟ್ಟಿ ಬೀಡಿ ಸೇದುವುದು ನೇತೃಗುಣ ಕಸಿದುಕೊಂಡು ಬಂದ ॥ ೧೮ ॥

ಮುಖಂ ಪೃಷ್ಟಂ ನಖಂ ಪೃಷ್ಟಂ ತುಂದಿಲತ್ವಂ ಪ್ರಪೃಷ್ಟತಾ ।
ಶುಕಂ ಹತ್ವಾ ಪಿಕಂ ಹತ್ವಾ ಶಾಸ್ತಿರಾಜ್ಯಂ ಸುಪೃಷ್ಟವಾನ್ ॥ ೧೯ ॥

ಪೃಷ್ಟಬುದ್ಧಿ ತಲೆಗಿಲ್ಲವೆಂಬುದೇ ಪೃಷ್ಟವಾದಸಾರ
ಉತ್ತರಗಿತ್ತರ ಪ್ರಶ್ನೆಗಿಲ್ಲ ಮೂಕಾಸುರಾವತಾರ ।
ಪೃಷ್ಟತಿರುಗಿದರೆ ರಾಜ್ಯತಿರುಗುವುದು ಮಹಾಪೃಷ್ಟಧರರ
ಪೃಷ್ಟಪ್ರಥೆಯಿದೆ ಮಿಣುಕುಹುಳಕ್ಕೂ ಬಲ್ಲಿರೇನು ಖಬರ ॥ ೨೦ ॥

ಬಂಡವಾಳದಪ್ರತಿಮ ಮೂಲವೀ ಪೃಷ್ಟ ಗೋತ್ರದವರ
ಜೊಂಡಿಗ ಮೂಸೆಯ ಹೊತ್ತ ಮುಖವು ಸಹ ಪೃಷ್ಟಗಿರಿಯ ಶಿಖರ ।
ಚಂಡಕೋಪ ಪೃಷ್ಟಪ್ರತಾಪ ವಿಶ್ವಾದಿಮೂಲ ಮೇರು
ಮಂಡ ನಂಗಳಲ್ಲಗ್ರಗಣ್ಯವಿದು ಪೌರುಷಕ್ಕೆ ಬೇರು ॥ ೨೦ ॥

ವಿಚಿತ್ರ ಪ್ರಜ್ಞಾ ವಿಲಾಸವೆಂಬ ಹತ್ತನೆಯ ಸರ್ಗ

X

The world of Strangers

ಅಪರೂಪವನುರೂಪ ಅಪಲಾಪ ಸಲ್ಲಾಪ
ಅಪರಿಚಿತರಾಜ್ಯವಿದು ಪರಿಚಿತರಲಿ ।
ಸುಪರೀಕ್ಷೆಗೊಳಪಡಿಸಿ ವ್ಯತ್ಪಿಂಡ ಮತಿಯನ್ನೆ
ಕಪಟಿಗಳು ಮೆಚ್ಚುವುದು ಮಂತ್ರಿಗಳಲಿ ॥ ೧ ॥

ಅಪಕಾರವುಪಕಾರ ಲೋಕಕೆ ನೇತೃಗಳು
ತಪಿಸಿಮಾಡುತ್ತಿಹುದು ಹುಚ್ಚು ಕೆಲಸ ।
ವಿಪಿನವನ್ನೇ ಕಡಿದು ವನಮಹೋತ್ಸವ ಮಾಳ್ಪ
ಚಪಲ ಶಾಸ್ತ್ರಜ್ಞ ನಾಘೀಸಿಗಲಸ ॥ ೨ ॥

ಮೋಸದಲಿ ವೇಷ, ವೇಷದಲಿ ಮೋಸ —
ಇವರಲ್ಲಿದಾವ ದೋಷ ?
ಇರಿತ ಮುರಿತಗಳ ವಿಶ್ವರೂಪವನು
ಎಣಿಸಬಲ್ಲ ಶೇಷ! ॥ ೩ ॥

ಹೊಸನಮೂನೆಗಳ ನಮಗೆ ತೋರಿಸಿದ
ದೈತ್ಯ ನಮ್ಮ ಭಾವ
ಪಾಪ ಪುಣ್ಯಗಳ ಭೇದವಳಿದಿರಲು
ಜನರ ನಾವ ಕಾವ ? ॥ ೪ ॥

ತಿರುಗಿಸು ಪೃಷ್ಠವ ನೀತಿಗೆ ಭೀತಿಗೆ
ನಿರ್ನಿಮಿತ್ತವಾಗಿ
ಜಗವ ನಿರ್ಮಿಸಿದನಂತೆ ಬೊಮ್ಮ ತಾ
ತನ್ನ ಲೀಲೆಗಾಗಿ ॥ ೫ ॥

ನೂರು ದಿವಸ ಹಗಲಿರುಳು ಬೈಸಿಕ
ಲ್ಲಿಳಿಯದೋಡುತಿರುವ
ಗೇರುಬಳಿದ ಮೊಗಪವನ ನೋಡಲಿದೆ
ಜನರ ಸಂತೆ ಬರುವ ! ॥ ೬ ॥

ಇಂಗ್ಲಿಷ್ ಬಾಡಿಯು ಚೂಚುಕ ಮೊಳೆಗಳ
ನಿಗುರಿಸಿ ನರ್ತಿಸುವಂಥವರ
ನೋಡಲು ಸಿನೆಮಾಸ ಹೊರಡುವ ರಸಿಕತೆ
ಸೆಳೆಯದೆ ದೇವತೆಯಂಥವರ? ॥ ೭ ॥

ಈ [illegible] ಮಾರಕ
[illegible]
[illegible]
ದೇಶದ ನಾಶದ ಹರಿಕಾರ ॥ ೮ ॥

[illegible]
ಸಮ್ಮೋಹಿತಹ ತಜ್ಞಗಣ:
[illegible]
ಬಡವರೆ ಸರಿ ಎಂದೀತು ಜನ! ॥ ೯ ॥

[illegible] ಗೌರೀಶಂಕರವ–
ನ್ನೇರಿ ಬಂದ; ದೇವತೆಯುವನು:
ಅದ್ಭುತಕಾಗಿಯೆ ಅದ್ಭುತವೆಂಬುದು
ನವ್ಯಕವಿಗಳಿಗೆ "ಹನಿಮೂನು" ॥ ೧೦ ॥

ಎರಡು ಮೂರು ಜಡೆಪ್ರೊತ್ತ ಹೆಂಗಸರ
ಬರಡುನಗೆಯ ನೋಡಲು ಬನ್ನಿ;
ಹುರುಡಿಗಾಗಿ "ಮರ್ಡರ್" ಮಾಡಿಸುತಿಹ
ಸಾನಿಯರಿಗೆ ಸಲ್ಲಾಮೆನ್ನಿ! ॥೧೧॥

ವಿಚಿತ್ರ ಪ್ರಜ್ಞಾ ವಿಲಾಸವೆಂಬ ಹತ್ತನೆಯ ಸರ್ಗ

X

The world of Strangers

ಅಪರೂಪವಸುರೂಪ ಅಪಲಾಪ ಸಲ್ಲಾಪ
ಅಪರಿಚಿತರಾಜ್ಯವಿದು ಪರಿಚಿತರಲಿ ।
ಸುಪರೀಕ್ಷೆಗೊಳಪಡಿಸಿ ಮೃತ್ಪಿಂಡ ಮತಿಯನ್ನೆ
ಕಪಟಿಗಳು ಮೆಚ್ಚುವುದು ಮಂತ್ರಿಗಳಲಿ ॥ ೧ ॥

ಅಪಕಾರವುಪಕಾರ ಲೋಕಕೀ ನೇತ್ರಗಳು
ತಪಿಸಿಮಾಡುತ್ತಿಹುದು ಹುಚ್ಚು ಕೆಲಸ ।
ವಿಪಿನವನ್ನೇ ಕಡಿದು ವನಮಹೋತ್ಸವ ಮಾಳ್ಪ
ಚಪಲ ಶಾಸ್ತ್ರಜ್ಞ ನಾಘೀಸಿಗಲಸ ॥ ೨ ॥

ಮೋಸದಲಿ ವೇಷ, ವೇಷದಲಿ ಮೋಸ —
ಇವರಲ್ಲಿದಾವ ದೋಷ ?
ಇಂತ ದುರಿತಗಳ ವಿಶ್ವರೂಪವನು
ಎಣಿಸಬಲ್ಲ ಶೇಷ! ॥ ೩ ॥

ಹೊಸನಮೂನೆಗಳ ನಮಗೆ ತೋರಿಸಿದ
ದೈತ್ಯ ನಮ್ಮ ಭಾವ
ಪಾಪ ಪುಣ್ಯಗಳ ಭೇದವಳಿದಿರಲು
ಜನರ ನಾವ ಕಾವ ? ॥ ೪ ॥

ತಿರುಗಿಸು ಪೃಷ್ಠವ ನೀತಿಗೆ ಭೀತಿಗೆ
ನಿರ್ನಿಮಿತ್ತವಾಗಿ
ಜಗವ ನಿರ್ಮಿಸಿದನಂತೆ ಬೊಮ್ಮ ತಾ
ತನ್ನ ಲೀಲೆಗಾಗಿ ॥ ೫ ॥

ನೂರು ದಿವಸ ಹಗಲಿರುಳು ಬೈಸಿಕ
ಲ್ಲಿಳಿಯದೋಡುತಿರುವ
ಗೇರುಬಳಿದ ಮೊಗದವನ ನೋಡಲಿದೆ
ಜನರ ಸಂತೆ ಬರುವ ! ॥ ೬ ॥

ಇಂಗ್ಲಿಷ್ ಬಾಡಿಯ ಚೂಚುಕ ಮೊಳೆಗಳ
ನಿಗುರಿಸಿ ನರ್ತಿಸುವಂಥವರ
ನೋಡಲು ಸಿನೆಮಾಸ ಹೊರಡುವ ರಸಿಕತೆ
ಸೆಳೆಯದೆ ದೇವತೆಯಂಥವರ? ॥ ೭ ॥

ಈ ಸ್ವಾತಂತ್ರ್ಯ ಸ್ತ್ರೀಗೇ ಮಾರಕ
ಎಂಬುದ ನರಿಯದ ಮುಗ್ಧೆಯರ
ಪ್ರೌಢಾವೇಶಕೆ ತುದಿಮೊದಲೆಲ್ಲಿದೆ
ದೇಶದ ನಾಶದ ಪರಿಹಾರ ॥ ೮ ॥

[illegible] ಸಮಿತಿಯ ಸಂಗಡಸಮಾಜ
ಸಮಾಲೋಚಿತಹ ತಜ್ಞಗಣ:
ಮೋಸದ ವೇಷದ ಸಾಹುಕಾರರುಗಳು
ಒಡವೆರೆ ಸರಿ ಎಂದೀತು ಜನ! ॥ ೯ ॥

[illegible] ಗೌರೀಶಂಕರದ–
[illegible]
[illegible]
[illegible] ॥ ೧೦ ॥

ಎರಡು ಮೂರು ಜಡೆಪ್ರೊತ್ತ ಹೆಂಗಸರ
ಬರಡುನಗೆಯ ನೋಡಲು ಬನ್ನಿ;
ಹುರುಡಿಗಾಗಿ "ಮರ್ಡರ್" ಮಾಡಿಸುತಿಹ
ಸಾನಿಯರಿಗೆ ಸಲ್ಲಾಮೆನ್ನಿ! ॥ ೧೧ ॥

"ಫಾರಿನ್" ಡಿಗ್ರಿಯ ಪ್ರಚಂಡ ಪಂಡಿತ
ಆರುಭಟಿಸುವದ್ಭುತದಿಂದ
ಪಾರಾಗದು ಜನರಾಣಿ ಬೆಂಬಲಿಸೆ
ಕೋಟಿ ಕೋಟಿ ಖರ್ಚಾನಂದ! ॥ ೧೨ ॥

ಜಾಣಿಗಳ ಚಮತ್ಕಾರ, ಗದ್ದಲದ ಗಮಕ ಮೋಣ್
ಪ್ರಳಯತಾಂಡವ ಸೇನೆಯೊಡೆಯ ಬಾಯ್ಮಾತಿನ
ಕಳಪಳದ "ಸ್ಟಂಟ್ ಹೀರೊ" ಕವಿ, ಮಂತ್ರಿ, ಕುಲಪತಿ
ವಿಮರ್ಶವಿಜ್ಞಾನಿಯಥವಾ ।
ಅಳಿದ ವೀರರ ಹೊಗಳಿ ಭಾಷಣಿಸಿ ಬೊಬ್ಬಿರಿದು
ಗಳಿಸಿ ಮೆರೆವಖಿಲ ಕಪಟೋಪದೇಶಕರೆದ್ದು
'ಇಳಿಯು ಪೆಟ್ಟರ ಹುಚ್ಚುಮಾಡಿ ಹೊಟ್ಟೆಯು ಹೊರೆದು
ಕೊಂಬ ಸೌಂದರ್ಯವೆಷ್ಟು ! ॥ ೧೩ ॥
ದೊಂಬರಾಟ ಸಮಗ್ರಯೋಗ ವಿ
ಡಂಬನೀಯ ಸಮುಚ್ಚಯಾಗಮ
ಶಂಬದಾರಿಯ ಬಲೆಗೆ ಸಿಕ್ಕದ ಶಾಸಕರ ಬಣದ।
ಜಂಬದಾಟದ ಭಜನೆ ಬಾಜನೆ
ಕಂಬದಲಿ ನರಸಿಂಹನನು ತಾವ್
ತುಂಬಿ ಹೊರಬರಿಸುವ ಸಮುತ್ಪಾದನೆಯ ರಂಬಾಟ ॥ ೧೪ ॥
ರಾಜಕೀಯದೊಂಬ ಮುಖ್ಯಮಂತ್ರಿಯಾದ ರಾಜ್ಯ
ವ್ಯಾಜ ತತ್ವದಧ್ಯಾತ್ಮ ಪ್ರಚಾರ ಸವಿಭೋಜ್ಯ
ಪೇಜು ಕಾಪಿ ಮಾಡಿದರೂ ದಕ್ಕಿಸಿಕೊಂಡಾರು
ಬೋಜುಗಾರ ಶಾಸಕ ಸುತರೆಲ್ಲವನುಂಡಾರು ॥ ೧೫ ॥

ಮಾತಿನ ದೊಂಬ
ಬೇತಿನ ದೊಂಬ
ವ್ಯಾಪಾರದ ದೊಂಬ
ನೌಕರ ದೊಂಬ
ನಾಯಕ ದೊಂಬ
ಆಧಾರ ಸ್ತಂಭ!
ಮದ್ಯಾಸನ ಮಾಂಸಾಸನ ಮಾನಸೋತ್ತರಾಸನ
ಪದ್ಯಾಸನ ಗದ್ಯಾಸನ ಯೋಗಮಾತ್ರಕಾಸ್ತ್ರನ
ಪ್ರೋತ್ಸಾಹಣ ನಿರ್ಮಿಸುತಿಹ | ಭೋಗ ಯೋಗಸಾಧನ
ಪಾಠವಿಲ್ಲ ಆಟವೆಲ್ಲ ಶಿಕ್ಷಣ ಸಂಬೋಧನ ‖ ೧೬ ‖

ಬುಡುಬುಡುಕಿಯು ಹಿಡಿಯದೆ ಕಣಿ ಹೇಳುವ
ದುಡುಕುವ ಧುಮುಕುವ ಯುವಜನ ಕೇಳುವ
ಕಡುಪಿನ ಉಡುಪಿನ ಅಭಿನಯದರ್ಪಣ
ಬಿಡುಬಿಟ್ಟುಗಳನು ಕುಣಿಸುವ ಧನಿಗಣ ! ‖ ೧೭ ‖

ಗಾಡುಪಿಣಿ, ಕುಂಟುಪಿಣಿ. ಹಕ್ಕಿಕುರುಬ, ಕಪಾಲ-
ತಾಂತ್ರಿಕ. ಮಹಾದೇವ. ಭೈರವೇಶ್ವರ ಪಾತ್ರಿ;
ಮುಟ್ಟಿಸಿನ ವೈದ್ಯ, ಮಾಯಾವಿದ, ಮನೋಹಂತ್ರ,
ಮಂಗ-ಹಾವುಗಳನ್ನು ಬಸವಕರಡಿಗಳನ್ನು
ಲಾಗ ಹಾಕಿಸಿ ದುಡ್ಡು ಸೆಳೆವಾತ್ಮಗಳು ಸತ್ತು
ಬಾಗಿಲಿದುರೀಗ ರಾಜಕರೂಪಗಳ ತಾಳಿ
ಬರುತಿಹವು ಕಿರಿಕಿರಿಯು ಕೊಡುತಿಹವು: ದುಷ್ಕೇಳಿ
ಸಾರಾಟ ಸಾಗುತಿದೆ: ಜಪ್ತಿಗದೆ ಸುಕೇಳಿ! ‖ ೧೮ ‖

ಟೋಪಿ. ಪ್ರೋಗದೆ. ರುಮಾಲು, ಹ್ಯಾಟು ಬುರುಕಿಗಳಲ್ಲಿ
ಮಹಾತ್ಮಗಳು ತಮ್ಮ ಹಳೆ ರೂಪಗಳ ಮುಚ್ಚಿ
ಪೇಟೆ ಪಟ್ಟಣಗಳಲಿ ತಿರುಗುತಿವೆ ತಿರುಕತನ
ನಾಗರಿಕತೆ: ಮಹಾತ್ಮರುಗಳ ಹೆಸರನು ಹೇಳಿ

ಹೋಗಿ ಟೀಕೆಗಳ ತುಂಬ ಪ[illegible]ಗಳಾಗುತ್ತಿಹವು!
ಕೊಟಿಬಾರಿಬಾಗ್ಲ ದು[illegible]ಯವಾ! ಇವರ
ಹೊಟ್ಟೆ ಹಿಪಾಳಿನ ಲೀಲೆಗ ಪಕ್ಷ ಮಂದೆಂಬ
ಚೀಟಿಯುಂಟಿಸಿದುದನು ನಿಜವೆಂದು ನಂಬಿರುವ
ಪಾತಕರು ತುಂಬಿರುವ ಇಂಡಿಯಾದೇಶದಲಿ
ಚೋಟುದ್ದ ಹುಡುಗನೂ ಪತ್ರದಾರ ಹುರಿಯಾಳು! ॥ ೧೯ ॥

ವಿಜ್ಞಾನದ ಕುಂಬಳ ಕಾಯೊಳಗಿಹ
ಪೌರಾಣಿಕಗಳ ಪಸರಿಸಿ ಹೇಳುವ
ತಜ್ಞರ ಸಾಕಣೆಗಲ್ಲಿ ಧನವ್ಯಯ
ಮಾಳ್ಪುದು ಕೇಂದ್ರದ ದುಷ್ಟ ಚತುಷ್ಟಯ!
ಮೊಘಲಾಳಿತಕೆ ಸ್ವಂತದ್ದೇ ವ್ಯಥೆ
ಕಾಲಾಯಸಕರ ಮಾಡಿದ್ದೇ ಕಥೆ
ಬಾನುಲಿ ದಿನದಿನವೂ ಹೇಳುತ್ತಿದೆ
ನಬಿ ಶೌರ್ಯಂಗಳ ಪೃಷ್ಠಪರಾಕ್ರಮ
ಹೊಸ ಆಯಾಮವ ತೋರಿದ ಬಗೆಗಳ! ॥ ೨೦ ॥

ಹಳೆಯುದಕೇ ಹೊಸ ಉಡುಪನು ತೊಡಿಸುತ
ಹೊಸದಕ್ಕೂ ಹಳೆಯುಡುಪನು ಹಾಕುತ
ಹಾಗೂ ಹೀಗೂ ಹೆಸರನು ಗಳಿಸುವ
ಸತ್ಯಾಸತ್ಯವಿವೇಕವ ಮರೆಸುವ
ವೈಚಾರಿಕ ಪುಂಗಿಗಳನ್ನೂದುವ
ಧನಲಕ್ಷಗಳನು ಗುಳುಮನೆ ನುಂಗುವ
ಬುದ್ಧಿಜೀವಿಯ ನೂರವತಾರವ
ಮಾರುತಿ ಕಾರುಗಣವೃಕ್ಷ ರೂಪವ
ತೋರುವ "ಗ್ಯಾಂಗ್‌ಸ್ಟರ್" ಬಳಗವ ಸಾಕುವ
ಪ್ರಜಾಪ್ರಭುತ್ವದ ಸ್ವರಾಜ್ಯವೈಭವ! ॥ ೨೧ ॥

ಉಚ್ಚಾರಕ್ಕೂ ಆಚಾರಕ್ಕೂ ಮೈಲು ಮೈಲು ದೂರ
ಪ್ರಚಾರವೊಂದೇ ಚುನಾವಣೆಗಳಲಿ ಕಿವಿ ತುಂಬುವ ಭಾರ
[illegible] ಸಕ್ಕರೆ ಕೇಳಿಸದು
[illegible] ದರೆ ಯಾರಿಗು ಕಾಣಿಸದು!
[illegible] ವೋಗಿರುವುವು
[illegible] ಜಯ ಜಯ ಎನ್ನುವೆವು! ॥ ೨೨ ॥

ವಿಕೃತಕಗಳ ಹೊರೆ ಹೊರೆ ಹೊರೆ
ಪ್ರಕೃತಕ್ಕಸಮರ್ಪಕಂ ವಿಸಂಗತಮೆಲ್ಲಂ।
ಪ್ರಕರಣಗಳಸಂಖ್ಯಾತಂ
[illegible] ಸಾಕ್ಷಿ ನರರ [illegible]ವಲ್ಲಂ ॥ ೨೩ ॥

ವಾನರಸೇನಾನಾಯಕ
[illegible] ರಾಜ್ಯಂಗೆಯ್ದರ್।
[illegible]
ಕಾನನವಾಯುಸ್ತ್ರರು ವನ್ಯಚೇಷ್ಟೆಗಳಿಂದಂ ॥ ೨೪ ॥

ನರಮೇಧದ ವೈಚಿತ್ರ್ಯಂ
ಕರಪರತೆರಕಾರರನುಭವಕ್ಕೇ ವೇದ್ಯಂ।
[illegible] ತೆರಮೇ
ಕಿರ ಬೇಕೆಂಬಾತನುಸಿರಿನೊಳಿನಿ ಧರೆಯೊಳ್ ॥ ೨೫ ॥

ನೋಟು ಪರಮಾತ್ಮನಾಗಲ್
"ಗೇಟ್ ಪಾಸ್" ಬದುಕಿರಲು ಲಂಚವಾಗಲ್ ದೀನರ್।
[illegible]
ವೋಟುಗಳನ್ನಿಟ್ಟು ಸುಖಫಲವ ಕೊಯ್ಯುವರ ॥ ೨೬ ॥

ಜೀವನ್ಮೃತಿ ಸತ್ಯಾರ್ಥಿಗೆ
ಜೀವಂ ಸಿಹಿಯೆಂದು ಚಪ್ಪರಿಸಲೊತ್ತಾಯಂ।
ಕಾವವರಿಂದಂ ಬಂದಿರೆ
ಸಾವನ್ನೇ ಹಗ್ಗವೆಂದು ಬಳಸುವೊಡಾಜ್ಞೆ ॥ ೨೭ ॥

ಅಧಿಕಾರದ ಚೇಳ ಕುಟುಕಲ್
ಮಿದುಳಕ್ರಮವಿಕ್ರಮಕ್ಕೆ ತೊಡಗುವುದನಿಶಂ।
ವೇದವೀದ್ರೋಗೀದ್ರಂ ಗಡ
ವಿಧವೆಯನೆದುರಿಟ್ಟು ಸಧವೆಯೆಂದಾಡೀತು ॥ ೨೮ ॥

ಸರ್ವಾವಯಂಗಳ ವೇಗವು-
ಗುರ್ವಿಸಿರಲ್ ರಾಜಕಕ್ಕೆ ದಶಶತಮತಿಗಳ್।
ಗರ್ವಿಸಿ ಮೂಡಲ್ ಸರ್ವಂ
ದುರ್ವಾಸ್ಯಂ ಸನ್ಮತಿಪ್ರಧಾನರಿಗೆಲ್ಲಂ ॥ ೨೯ ॥

"ಏತಾ ಹಸಂತಿ ಚ ರುದಂತಿ ಚ ವಿತ್ತಹೇತೋಃ
ವಿಶ್ವಾಸಯಂತಿ ಚ ನರಂ ನತು ವಿಶ್ವಸಂತಿ ॥ ೩೦ ॥

ಏಚಿಂತೀನಾಡ ನಾಯಿಕಾ ಭಕ್ತರಲ್ಲರೂ ನಡೆದುಕೊಳ್ಳಲಾರಂಭಿಸಿದಾಗ ಸಂಮೋಹನಾಸ್ತ್ರಕ್ಕೆ ಮಂತ್ರದಾರರೆಲ್ಲರೂ ಬಲಿಯಾದಂತೆ ತೋರಿದ್ದರಿಂದ, ವ್ಯಾಪಾರಿಕಾದ್ವೈತಗಳಿಂ ದ್ವಂದ್ವಗಳ ಗರ್ಗಗಳನ್ನು ಹೊಕ್ಕು ವಿಜೃಂಭಿಸಿದ್ದರಿಂದ, ವಿಚಿತ್ರ ಪ್ರಜ್ಞಾವಿಲಾಸವು ರಾಷ್ಟ್ರವನ್ನೂ ರಾಜ್ಯಗಳನ್ನೂ ಮಂಕುಬೂದಿಗೊಳಪಡಿಸಿದ್ದು ಕಂಟಕಾರಿಕಾವೃಪ್ರಸವಕ್ಕೆ ಕಾರಣವಾಯಿತು. ಕಂಟಕಸ್ಯ ಅರಿಃ = ಪಾದರಕ್ಷೆ: ಅದಕ್ಕೆ ಸರಗಳ ಬಲಿ. ಸರ್ವಾಧಾರಗಳಾಗೂ ನ್ಯಾಯವಾಗಿ

ಬಂದದ್ದರಿಂದ-ಮಾಜಿಯಾದ ಕೂಡಲೇ ಉಕ್ತಸರಗಳು ಮಹಾಪ್ರಧಾನರ
ಕೊರಳಿಗೆ ಬೀಳತೊಡಗಿದ್ದರಿಂದ —

ಸಗ್ಗಂನರಕಂ ಮೋಕ್ಷಂ
ದುರ್ಗತಿ ಸದ್ಗತಿಗಳೆಲ್ಲ ಭೂತಲದೊಳಗೇ ।
ವಿಘ್ನಾವಿಘ್ನಂಗಳೊಡಲ್
ಭಗ್ನೇತರ ಮಿಮಾಳಹೋ ಬತ ಪ್ರಾಣಿಗಳೇ ॥ ೩೧ ॥

ಕಂಟಕಸರ್ಗಂ ಶರಣಂ
ಕಂಟಕರಿಪ್ರ ಕಾಯದಿರ್ಪ ತಲೆಗಳ್ಗೆಂದುಂ ।
“ಫ್ಯಾಂಟಂ” ಸಾಹಸಕಾರ್ಯಂ
ಗಂಟಲಗಾಣಂ ಪೆರರ್ಗೆ ದುಃಶಾಸ್ಯರ್ಗೆ ॥ ೩೨ ॥

ಅಭಿನವ್ಯಂ ಜನಕಾವ್ಯಂ
ನಭ ಸ್ಥಲೀಯುಂ ವಿಸ್ಪೃಷ್ಟಿವಿದ್ಯಾಜಾತಂ ।
ಅಬುಧರ್ ಸುಬುಧರ್ ವಿಬುಧರ್
ಪ್ರಭಾವ್ಯಕಪ್ಪರ್ ಪ್ರಕಂಟಕಿತರಿಂದಪ್ಪರ್ ॥ ೩೩ ॥

ಪಟ್ಟಣ ಶೆಟ್ಟರ್ ಶೆಟ್ಟರ ।
ಪಟ್ಟಣಗಳ್ ಕಂಟಕೋದ್ಭವಂಗಳ್ ಧೀರರ್ ।
ಮೆಟ್ಟದ ಮೆಟ್ಟುಗಳಂಗಡಿ
ಪ್ರಪ್ಪಂ ಕಂಟಕಗಳಿಂದಮಿೂ ಸಂಸ್ಕೃತಿಯೊಳ್ ॥ ೩೪ ॥


ಆರಾರೇರರ್ ಶಾಸ್ತ್ರ-
ಶ್ರೀ ರಾಜ್ಯದ ಪಟ್ಟಮಂ ಮಹಾಕವಿಗಣದೊಳ್
ಆರಯ್ದುವರ್ಗಿದೊ ನಮನಂ
ಸಾರಾ ಸಾರಾಜ್ಞ ಸಹೃದಯರ್ಗೆಂ ಮಾತ್ರಂ ॥ ೩೫ ॥



ಒಪ್ಪೋಲೆ

ಪುಟ	ಸಾಲು	ತಪ್ಪು	ಒಪ್ಪು
2	8	ಕುಮನೀಯಂತೆಯಿಂ	ಕಮನೀಯಂತೆಯಿಂ
2	19	ಡಿವಿಡೆಂಡ್	ಡಿವಿಡೆಂಡ
2	26	ಪ್ರಜೆಗಳಿಂದೋಳ	ಪ್ರಜೆಗಳಾಂದೋಳ
3	26	ಜೊರಿನ	ಜೋರಿನ
5	4	ನುದ್ಧಾಮ	ನುದ್ದಾಮ
6	7	ಮಾರ್ಕ	ಮಾರ್ಕಿ
10	13	ಬಂಗಲದಾ	ಬಂಗಾಲದಾ
12	2	ಸರೀಸ್ವಪ್ರ	ಸರೀಸೃಪ
12	8	ಸರ್ವಾಕರ್ಘಂ	ಸರ್ವಾಕರ್ಷಕಂ
12	18	ಪ್ರತಿಮೂರರ್	ಪ್ರತಿಮಾನರ್
14	3	ಹುಪ್ಪುಗಿವಿ	ಹಪ್ಪುಗಿವಿ
15	23	ವಿರಿಸಿದ	ವಿರಂಸಿದ
26	3	ಬಾಯ್ಗ್ಗ ಸೆಯಿರೊ	ಬಾಯ್ಗ್ಗ ಸಿಯಿರೋ
26	18	ಧಾರೆಳ	ಧಾರೆಗಳ
35	16	ಸ್ಥಾಪಿಸುವನು	ಸ್ಥಾಪಿಸುವೆನು
36	6	ಕೇಳಿಂದು	ಕೇಳಿದೆಂದು
41	4	ಯಾಕಾನೀಕಂ	ಯಾಕಾನೀಕಂ
41	21	ಚುಚ್ಕುವುದು	ಚುಚ್ಚುವುದು
42	5	ಯಾವಾಗಲೂ	ಯಾವಾಗಲು
44	24	ಭಲಿ	ಭಲೇ
48	23	ಕಷ್ವ	ಕಷ್ಟ
52	6	ಬಾಯ್ಮಾತ್ರಿನ	ಬಾಯ್ಮಾತ್ರಿನವ
52	15	ಶಂಬನಾರಿಯು	ಶಂಬರಾರಿಯು
56	15	ಭಕ್ತರಲ್ಲರೂ	ಭಕ್ತರೆಲ್ಲರೂ

ಈ ಗ್ರಂಥ ಕರ್ತರ ಇತರ ಪ್ರಕಟನೆಗಳು



1. ಕಿನ್ನರ ಗೀತ, ಅಮೃತ ಬಿಂದು ಮಂಜುಗೀತ.ಮೇಘನಾದ ಮತ್ತು ರಸಯಜ್ಞ(ಕವನ ಸಂಗ್ರಹಗಳು)
2. ಹೊಸಗನ್ನಡ ಸಾಹಿತ್ಯ ಶೈಲಿ, ಬೇಂದ್ರೆ, ಟಿ. ಎಸ್. ಎಲಿಯಟ್ ಕವೀಂದ್ರ ರವೀಂದ್ರ, ಕಾವ್ಯಸೂತ್ರ (ವಿಮರ್ಶಗ್ರಂಥಗಳು)
3. ಭಾರತೀಯ ನಾಗರಿಕತೆಗೆ ಮನುವಿನ ಕೊಡುಗೆ, ಜ್ಞಾನಸೂತ್ರ, ವಿದೇಶದ ತಿಳಿವಳಿಕೆಗಳು, ಪಂಚಮುಖಿ, ರಾಷ್ಟ್ರಸೂತ್ರ, ಪ್ರತಿಭೆ, ಮಾನಸದರ್ಪಣ (ಪ್ರೌಢಪ್ರಬಂಧಗಳು)
4. ಕುಂಬ ಮಾಲೆ(ನಾಟಕ),ಸಂಸ್ಕೃತಸುಭಾಷಿತ ಸಂಗ್ರಹ, ಮನುಸ್ಮೃತಿಯ 7ನೇಂ ಅಧ್ಯಾಯ, ಭಾರತೀಯ ವಾಙ್ಮಯ,ಭಾರತೀಯ ರಾಜ್ಯಶಾಸ್ತ್ರದ ಸತ್ವ ಮತ ಸ್ವರೂಪ, ಸ್ವಾತಂತ್ರ್ಯ ಮೀಮಾಂಸೆ (ಭಾಷಾಂತರ ಗ್ರಂಥಗಳು)
5. ರಮಣಮಹರ್ಷಿ, ಮುತ್ತುರತ್ನ, ಕೌಶಿಕ ರಾಮಾಯಣ ಮಯೂರ ಶರ್ಮ(ಮಕ್ಕಳ ಸಾಹಿತ್ಯ)
6. ಭಾಷಣ ಭೈರವರ ಒಡ್ಡೋಲಗ,ಮರುಳ ಸಿದ್ಧನ ಮಹಾವಚನಗಳು (ವಿಡಂಬ ಸಾಹಿತ್ಯ)
7. ಭಾನುಮತೀ ಕಲ್ಯಾಣ (ಸಂಪಾದಿತ ಯಕ್ಷಗಾನ ಪ್ರಸಂಗ)
8. ಬನವಾಸಿಯ ಕದಂಬರು (ಇತಿಹಾಸಗ್ರಂಥ)
9. ಉತ್ತರ ಕನ್ನಡದ ಪ್ರೇಕ್ಷಣೀಯ ಸ್ಥಳಗಳು (ಪ್ರವಾಸಿ ಸಾಹಿತ್ಯ.)
10. ನೆಹರು ಉವಾಚ (ಸೂಕ್ತಿಮುಕ್ತಾಫಲ)